ಸಂಪುಟ 01 | ಸಂಚಿಕೆ 214 ಗುರುವಾರ 08 ಅಕ್ಟೋಬರ್ 2026 | ಪುಟ 4 | ಬೆಲೆ-2 ರೂ.

ಇರ್ಫಾನ್ ಕೆ
ಸಂಪಾದಕರು

M A ವಹಾಬ್
ಪ್ರಧಾನ ಸಂಪಾದಕರು

ನೈಜ್ಯ ದೆಸೆ
NAIJYA DESE

ಸತ್ಯದ ದಿಕ್ಕು TRUE PATH

ಕನ್ನಡ ದಿನ ಪತ್ರಿಕೆ

ಸಿಂಧನೂರು, ಮಸ್ಕಿ
ಮಾನ್ವಿ, ಅಂಗಸೂರು,
ರಾಯಚೂರ,ದೇವದುರ್ಗ
ಬಳ್ಳಾರಿ, ಕೊಪ್ಪಳ
ಯಾದಗಿರಿ, ಕಲಬುರ್ಗಿ,
ಬೀದರ, ವಿಜಯಪುರ.
ಗದಗ, ವಿಜಯನಗರ.
ಏಕಕಾಲಕ್ಕೆ ಪ್ರಕಟಣೆ

REGIONAL KANNADA DAILY MORNING

RNI code: KNKAN/25/A3581 ಮೋ: 9902277588, 9880707587, 9008787586 naijyadese@gmail.com

ಈ ದಿನದ ವಿಶೇಷ

1)Indian Air Force Day (ವಾಯುಪಡೆ ದಿನ)
ಭಾರತದಲ್ಲಿ ಪ್ರತಿವರ್ಷ ಅಕ್ಟೋಬರ್ 8ರಂದು ಆಚರಿಸಲಾಗುತ್ತದೆ. 1932ರಲ್ಲಿ ಭಾರತೀಯ ವಾಯುಪಡೆ ಸ್ಥಾಪನೆಯಾದ ದಿನವನ್ನು ಸ್ಮರಿಸಲಾಗುತ್ತದೆ.

2) World Octopus Day (ವಿಶ್ವ ಆಕ್ಟೋಪಸ್ ದಿನ)
ಆಕ್ಟೋಪಸ್‌ಗಳ ಬಗ್ಗೆ ಜಾಗೃತಿ ಮೂಡಿಸಲು ಮತ್ತು ಸಮುದ್ರ ಜೀವವೈವಿಧ್ಯವನ್ನು ಗೌರವಿಸಲು ಆಚರಿಸಲಾಗುತ್ತದೆ.

3)World Sight Day ದೃಷ್ಟಿ ಆರೋಗ್ಯ ಮತ್ತು ಕಣ್ಣಿನ ಆರೈಕೆಯ ಮಹತ್ವದ ಬಗ್ಗೆ ಜಾಗೃತಿ ಮೂಡಿಸುವ ದಿನ. ಇದು ಪ್ರತಿ ವರ್ಷ ಅಕ್ಟೋಬರ್‌ನ ಎರಡನೇ ಗುರುವಾರ ಬರುತ್ತದೆ; 2026ರಲ್ಲಿ ಅಕ್ಟೋಬರ್ 8ರಂದು ಬರುತ್ತದೆ.

ಸುಭಾಷಿತ

ಉತ್ತಮವಾದುದು ಶ್ರಮವಿಲ್ಲದೇ ಲಭಿಸದು, ಇಚ್ಛೆಯಿಲ್ಲದಿದ್ದರಂತೂ ಅದು ಸಾಧ್ಯವೇ ಇಲ್ಲ.

–ಕುವೆಂಪು

ಸನ್ ರೈಸ್ ನರ್ಸಿಂಗ್ ಕಾಲೇಜು ವಿದ್ಯಾರ್ಥಿಗಳಿಂದ ಸಮುದಾಯ ಮಟ್ಟದಲ್ಲಿ ಸಾಂಕ್ರಾಮಿಕ ರೋಗಗಳು ತಡೆಗಟ್ಟಲು

ಜನಜಾಗೃತಿ ಮೂಡಿಸುವ ಕಾರ್ಯಕ್ರಮ

❏ ನೈಜ್ಯ ದೆಸೆ ನ್ಯೂಸ್

ಸಿಂಧನೂರು: ಜಿಲ್ಲಾಡಳಿತ ಜಿಲ್ಲಾ ಪಂಚಾಯತ ರಾಯಚೂರು ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ರಾಯಚೂರು ಹಾಗೂ ಪ್ರಾಥಮಿಕ ಆರೋಗ್ಯ ಕೇಂದ್ರ ಜವಳಗೇರಾ ಮತ್ತು ಸನ್ ರೈಸ್ ನರ್ಸಿಂಗ್ ಕಾಲೇಜ ಇವರ ಸಂಯುಕ್ತ ಆಶ್ರಯದಲ್ಲಿ ಸಾಂಕ್ರಾಮಿಕ ರೋಗಗಳು ತಡೆಗಟ್ಟುವ ನಿಟ್ಟಿನಲ್ಲಿ ಸಮುದಾಯದಲ್ಲಿ ಜನಜಾಗೃತಿ ಮೂಡಿಸುವ ಜವಳಗೇರಾ ಗ್ರಾಮದಲ್ಲಿ ಕಾರ್ಯಕ್ರಮ ಹಮ್ಮಿಕೊಳ್ಳಲಾಯಿತು .

ಕಾರ್ಯಕ್ರಮದ ಕುರಿತು ಮಾತನಾಡಿದ ಕ್ಷೇತ್ರ ಆರೋಗ್ಯ ಶಿಕ್ಷಣಾಧಿಕಾರಿ ಬಾಲಪ್ಪ ನಾಯಕ ಅವರು ಬರಗಾಲದಲ್ಲಿ ನೀರಿನ ಸಂಗ್ರಹ ಹೆಚ್ಚಾಗಿ ಲಾರ್ವ ಉತ್ಪತ್ತಿಯಾಗಿ ಸೊಳ್ಳೆಗಳು ಹೆಚ್ಚಾಗಿ ಸಾಂಕ್ರಾಮಿಕ ರೋಗಗಳು ಹರಡುವ ಸಾಧ್ಯತೆ ಇದೆ ಅದಕ್ಕಾಗಿ ಸಾರ್ವಜನಿಕರು ಸೊಳ್ಳೆಗಳು ಉತ್ಪತ್ತಿಯಾಗದಂತೆ ನೋಡಿಕೊಳ್ಳಲು ಹಾಗೂ ರಾತ್ರಿ ಮಲಗುವ. ಸಮಾಜದಲ್ಲಿ ಸೊಳ್ಳೆಗಳು



ನಿಯಂತ್ರಣಗಳನ್ನು ಬಳಕೆ ಮಾಡಲು ತಿಳಿಸಿದರು.

ನಂತರ ಮಾತನಾಡಿದ ಆರೋಗ್ಯ ನಿರೀಕ್ಷಣಾ ಅಧಿಕಾರಿಗಳಾದ ಅಂಬಮ್ಮ ಅವರು ಮಾತನಾಡಿ ಪ್ರತಿ ವಾರ ಲಾರ್ವ ಸಮೀಕ್ಷೆ ಮಾಡಲಾಗುತ್ತದೆ ಸಾರ್ವಜನಿಕರಿಗೆ ನೀರಿನ ಸಂಗ್ರಹಣೆ ಬಗ್ಗೆ ಸ್ವಚ್ಚತೆ ಬಗ್ಗೆ ಆಶಾ ಕಾರ್ಯಕರ್ತೆಯರು ಮತ್ತು ಆರೋಗ್ಯ ನಿರೀಕ್ಷಣಾ ಅಧಿಕಾರಿಗಳು ಮನೆ ಮನೆಗೆ ತೆರಳಿ ಸಾಂಕ್ರಾಮಿಕ ರೋಗಗಳ ಬಗ್ಗೆ ಜನಜಾಗೃತಿ ಮೂಡಿಸಲಾಗುತ್ತಿದೆ.

ನಂತರ ಸಮುದಾಯದ ಅಧ್ಯಯನಕ್ಕೆ ಬಂದಿರುವ ಸನ್ ರೈಸ್ ಪ್ಯಾರಾ ನರ್ಸಿಂಗ್



ಕಾಲೇಜು ವಿದ್ಯಾರ್ಥಿಗಳು ಐದು ತಂಡಗಳಾಗಿ ರಚನೆ ಮಾಡಿ ಸಾರ್ವಜನಿಕರಲ್ಲಿ ಸಾಂಕ್ರಾಮಿಕ ರೋಗಗಳು ಬಗ್ಗೆ ಮನೆ ಮನೆಗೆ ಭೇಟಿ ನೀಡಿ ಸಮೀಕ್ಷೆ ಮಾಡಿ ಆರೋಗ್ಯ ಶಿಕ್ಷಣ ಮತ್ತು ಸಂವಹನ ನೀಡಿ ಜನಜಾಗೃತಿ ಮೂಡಿಸಲಾಗುತ್ತಿದೆ.

ಈ ಸಂದರ್ಭದಲ್ಲಿ ಸನ್ ರೈಸ್ ನರ್ಸಿಂಗ್ ಕಾಲೇಜ ವಿದ್ಯಾರ್ಥಿಗಳು ಸಾರ್ವಜನಿಕರು ಅಂಗನವಾಡಿ ಕಾರ್ಯಕರ್ತೆಯರಾದ ಇಂದ್ರಮ್ಮ.ಉಮಾದೇವಿ. ಆಶಾ ಕಾರ್ಯಕರ್ತೆರಾದ ಮಲ್ಲಮ್ಮ .ಶರಣಮ್ಮ. ತಾಯಿಂದಿರು ಉಪಸ್ಥಿತರಿದ್ದರು.

ಪೊಲೀಸ್ ದರ್ಪದ ವಿರುದ್ಧ ದೂರು ನೀಡಲು ಹಿಂಜರಿಯಬೇಡಿ: ಮೋಹನ್ ಕುಮಾರ್ ದಾನಪ್ಪ

❏ ನೈಜ್ಯ ದೆಸೆ ನ್ಯೂಸ್

ಬಳ್ಳಾರಿ / ಕಂಪ್ಲಿ: ಪೊಲೀಸ್ ಅಧಿಕಾರಿಗಳು ಹಾಗೂ ಸಿಬ್ಬಂದಿಯ ದುರ್ನಡತೆ, ದೌರ್ಜನ್ಯ ಮತ್ತು ಅಕ್ರಮ ಬಂಧನದಂತಹ ಗಂಭೀರ ಪ್ರಕರಣಗಳ ವಿರುದ್ಧ ಸಾರ್ವಜನಿಕರು ಯಾವುದೇ ಭಯವಿಲ್ಲದೆ ಪೊಲೀಸ್ ದೂರುಗಳ ಪ್ರಾಧಿಕಾರಕ್ಕೆ ದೂರು ಸಲ್ಲಿಸಬಹುದು ಎಂದು ಕರ್ನಾಟಕ ರಾಜ್ಯ ಪೊಲೀಸ್ ದೂರುಗಳ ಪ್ರಾಧಿಕಾರದ ಸದಸ್ಯ ಮೋಹನ್ ಕುಮಾರ್ ದಾನಪ್ಪ ತಿಳಿಸಿದ್ದಾರೆ.

ಪತ್ರಿಕಾ ಪ್ರಕಟಣೆ ಹೊರಡಿಸಿರುವ ಅವರು, ಅಧಿಕಾರಿಗಳ ಹುದ್ದೆಗೆ ಅನುಗುಣವಾಗಿ ದೂರು ಸಲ್ಲಿಸುವ ವಿಧಾನವನ್ನು ಸ್ಪಷ್ಟಪಡಿಸಿದ್ದಾರೆ.




ಹೆಚ್ಚುವರಿ ಪೊಲೀಸ್ ಅಧೀಕ್ಷಕರು (ASP) ಹಾಗೂ ಅದಕ್ಕಿಂತ ಮೇಲ್ದರ್ಜೆಯ ಹಿರಿಯ ಅಧಿಕಾರಿಗಳ ವಿರುದ್ಧದ ದೂರುಗಳನ್ನು ಬೆಂಗಳೂರಿನಲ್ಲಿರುವ 'ಕರ್ನಾಟಕ ರಾಜ್ಯ ಪೊಲೀಸ್ ದೂರುಗಳ ಪ್ರಾಧಿಕಾರ'ಕ್ಕೆ ಸಲ್ಲಿಸಬೇಕು. ಅದೇ ರೀತಿ, ಡಿವೈಎಸ್‌ಪಿ ಹಾಗೂ ಅದಕ್ಕಿಂತ ಕೆಳದರ್ಜೆಯ ಅಧಿಕಾರಿ ಮತ್ತು ಸಿಬ್ಬಂದಿ ವಿರುದ್ಧದ ದೂರುಗಳನ್ನು ಆಯಾ ಜಿಲ್ಲೆಯ 'ಜಿಲ್ಲಾ ಪೊಲೀಸ್ ದೂರುಗಳ ಪ್ರಾಧಿಕಾರ'ಕ್ಕೆ ನೀಡಬೇಕು ಎಂದು ಅವರು ವಿವರಿಸಿದ್ದಾರೆ.

ದೂರು ಸಲ್ಲಿಸುವ ಸಾರ್ವಜನಿಕರು ತಮ್ಮ ದೂರುಗಳನ್ನು ಅಂಚೆ ಮೂಲಕ ಅಥವಾ ಖುದ್ದಾಗಿ ಈ ಕೆಳಗಿನ ವಿಳಾಸಕ್ಕೆ ಸಲ್ಲಿಸಬಹುದು: ಕರ್ನಾಟಕರಾಜ್ಯಪೊಲೀಸ್‌ದೂರುಗಳಪ್ರಾಧಿಕಾರ, 3ನೇ ಮಹಡಿ, ವಿಶ್ವೇಶ್ವರಯ್ಯ ಮುಖ್ಯ ಗೋಪುರ, ಡಾ. ಅಂಬೇಡ್ಕರ್ ವೀಧಿ, ಬೆಂಗಳೂರು–560001 ಇದಲ್ಲದೆ,spca@karnataka.gov.in ಇ–ಮೇಲ್ ಐಡಿ ಮೂಲಕವೂ ದೂರನ್ನು ಕಳುಹಿಸಬಹುದಾಗಿದೆ. ದಾಖಲಾದ ದೂರುಗಳ ವಿಚಾರಣೆ ಹಾಗೂ ಪ್ರಕರಣದ ಪ್ರಸ್ತುತ ಸ್ಥಿತಿಗತಿಯನ್ನು ತಿಳಿಯಲು ಸಾರ್ವಜನಿಕರು 080–22868302, 22868303ಗೆ ಸಂಖ್ಯೆಗಳಿಗೆ ಕರೆ ಮಾಡಿ ಮಾಹಿತಿ ಪಡೆಯಬಹುದು ಎಂದು ಪ್ರಕಟಣೆಯಲ್ಲಿ ತಿಳಿಸಲಾಗಿದೆ.

ಪರಂಪರೆ, ಸಂಪ್ರದಾಯ ಅನುಸರಿಸಿ ವಿಶ್ವದ ಸುರಕ್ಷತೆಗೆ ಕೆಲಸ ಮಾಡಿ : ಭಾಗವತ್

❏ ನೈಜ್ಯ ದೆಸೆ ನ್ಯೂಸ್

ಮುಂಬೈ: ಸಮಾಜ ಹಾಗೂ ವಿಶ್ವದ ಸುರಕ್ಷತೆ ಮತ್ತು ಕಲ್ಯಾಣಕ್ಕಾಗಿ ಭಾರತದ ಜನರು ತಮ್ಮ ಪರಂಪರೆ ಮತ್ತು ಸಂಪ್ರದಾಯಗಳನ್ನು ಅನುಸರಿಸಿ ಸಮಾಜದ ಒಳಿತಿಗಾಗಿ ಕೆಲಸ ಮಾಡಬೇಕು ಎಂದು ರಾಷ್ಟ್ರೀಯ ಸ್ವಯಂಸೇವಕ ಸಂಘದ (ಆರ್‌ಎಸ್‌ಎಸ್) ಮುಖ್ಯಸ್ಥ ಮೋಹನ್ ಭಾಗವತ್ ಹೇಳಿದರು.



ವಿಶ್ವ ಹಿಂದೂ ಪರಿಷತ್‌ನ ಮಾಜಿ ಅಧ್ಯಕ್ಷ ಅಶೋಕ್ ಸಿಂಘಾಲ್ ಅವರ ಜನ್ಮ ಶತಮಾನೋತ್ಸವದ ಅಂಗವಾಗಿ ನಾಗಪುರ ಜಿಲ್ಲೆಯ ದೇವಲಾಪುರದಲ್ಲಿರುವ ಗೋ–ವಿಜ್ಞಾನ ಅನುಸಂಧಾನ ಕೇಂದ್ರದಲ್ಲಿ ವಿವಿಧ ಯೋಜನೆಗಳಿಗೆ ಚಾಲನೆ ನೀಡಿ ಅವರು ಮಾತನಾಡಿದರು. ಎಲ್ಲರೂ ಸಾರ್ಥಕ ಜೀವನ ನಡೆಸುವಂತಾಗಲು ಪ್ರತಿಯೊಬ್ಬರೂ ತಮ್ಮದೇ ಆದ ಕೊಡುಗೆ ನೀಡಬೇಕು. ಸಮಾಜದ ಗಾತ್ರಕ್ಕೆ ಹೋಲಿಸಿದರೆ ಉತ್ತಮ ಕಾರ್ಯಗಳಲ್ಲಿ ತೊಡಗಿರುವವರ ಸಂಖ್ಯೆ ಕಡಿಮೆಯಿದ್ದು, ಸಾಮಾಜಿಕ ಕಾರ್ಯಗಳಲ್ಲಿ ಹೆಚ್ಚಿನ ಜನರು ಪಾಲ್ಗೊಳ್ಳಬೇಕು ಎಂದು ಭಾಗವತ್ ಕರೆ ನೀಡಿದರು. ಒಳ್ಳೆಯ ಕೆಲಸ ಮಾಡಿದವರನ್ನು ಸ್ಮರಿಸಲು ಎರಡು ಮಾರ್ಗಗಳಿವೆ. ಅವರಂತೆ ಉತ್ತಮ ಕಾರ್ಯಗಳನ್ನು ಮಾಡುವುದು ಅಥವಾ ಕೇವಲ ಅವರನ್ನು ನೆನಪಿಸಿಕೊಳ್ಳುವುದು. ಸಮಾಜಕ್ಕಾಗಿ ಏನಾದರೂ ಮಾಡಬೇಕು ಎಂದು ತಿಳಿದಿದ್ದರೂ, ಬೇರೆಯವರು ಮಾಡಲಿ ಎಂದು ಹಲವರು ನಿರೀಕ್ಷಿಸುತ್ತಾರೆ ಎಂದು ಅವರು ಹೇಳಿದರು. ವೈಯಕ್ತಿಕ ಜೀವನದಲ್ಲಿ ತ್ಯಾಗ ಮತ್ತು ಸಹನೆಯನ್ನು ಪ್ರದರ್ಶಿಸುವವರು ಇತರರಿಗೆ ಕಠಿಣ ಹಾದಿಯಲ್ಲಿ ಸಾಗಲು ಸ್ಫೂರ್ತಿಯಾಗುತ್ತಾರೆ. ಮೊರೋಪಂತ್ ಪಿಂಗ್ಲೆ ಮತ್ತು ಅಶೋಕ್ ಸಿಂಘಾಲ್ ಅವರಂತಹ ನಾಯಕರು ವೈಯಕ್ತಿಕ ಲಾಭಕ್ಕಿಂತ ಸಮಾಜದ ಒಳಿತಿಗೆ ತಮ್ಮ ಜೀವನವನ್ನು ಮುಡಿಪಾಗಿಟ್ಟಿದ್ದರು ಎಂದು ಭಾಗವತ್ ಸ್ಮರಿಸಿದರು.

ಕುಟುಕು ಕಾರ್ಯಾಚರಣೆ :

ಎಚ್ಚರಿಕೆಯಿಂದ ಇರುವಂತೆ ಸಚಿವರಿಗೆ ಸಿಎಂ ಡಿಕೆಶಿ ಎಚ್ಚರಿಕೆ

❏ ನೈಜ್ಯ ದೆಸೆ ನ್ಯೂಸ್

ಬೆಂಗಳೂರು: ಸಂಪುಟದ ಐದಾರು ಮಂದಿ ಸಚಿವರ ವಿರುದ್ಧ ಖಾಸಗಿ ಸಂಸ್ಥೆಗಳು ಹಾಗೂ ಕೆಲವು ರಾಜಕೀಯ ಪಕ್ಷಗಳು ಕುಟುಕು ಕಾರ್ಯಾಚರಣೆ ನಡೆಸುತ್ತಿದ್ದು, ಎಚ್ಚರಿಕೆಯಿಂದ ಇರುವಂತೆ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ತಿಳಿವಳಿಕೆ ನೀಡಿದ್ದಾರೆ. ನ್ನೆ ಬೆಂಗಳೂರಿನಲ್ಲಿ ನಡೆದ ಸಚಿವ ಸಂಪುಟ ಸಭೆಯಲ್ಲಿ ಈ ಕುರಿತು ಮಹತ್ವದ ಚರ್ಚೆಗಳನ್ನು ನಡೆಸಲಾಗಿದೆ. ಕಾಂಗ್ರೆಸ್ ಸರ್ಕಾರದ ಹೆಸರು ಕೆಡಿಸಲು ಹಾಗೂ ಪ್ರಮುಖ ನಾಯಕರ ರಾಜಕೀಯ ಭವಿಷ್ಯವನ್ನೇ ಹಾಳುಮಾಡಲು ಕೆಲವು ಸಂಸ್ಥೆಗಳು ಪಣತೊಟ್ಟಿವೆ.

ಅದಕ್ಕಾಗಿ ನಾನಾ ರೀತಿಯ



ಪ್ರಯತ್ನಗಳನ್ನು ನಡೆಸಲಾಗುತ್ತಿದೆ. ರಹಸ್ಯ ಕ್ಯಾಮೆರಾ, ಆಡಿಯೋ ರೆಕಾರ್ಡ್‌ಗಳನ್ನು ಗುಪ್ತವಾಗಿ ಬಳಸಲಾಗುತ್ತಿದೆ. ಇನ್ನೂ ಕೆಲ ಸಚಿವರುಗಳ ಜೊತೆ ದೂರವಾಣಿ ಸಂಭಾಷಣೆಯ ಮೂಲಕ ಟ್ರ್ಯಾಪ್ ಮಾಡಲಾಗುತ್ತಿದೆ ಎಂದು ವಿವರಿಸಿದ್ದಾರೆ.

ವಿವಿಧ ಕಾಮಗಾರಿಗಳ ಗುತ್ತಿಗೆ ವಿಚಾರವಾಗಿ ಚರ್ಚೆಗೆ ಬರುವವರು, ವರ್ಗಾವಣೆ ಹಾಗೂ ಇತರ ಕೆಲಸಗಳ ನೆಪದಲ್ಲಿ ನಡೆಯುವ ಸಂಭಾಷಣೆಯ ವೇಳೆ ಸಚಿವರು ಎಚ್ಚರಿಕೆಯಿಂದ ಇರ ದು ವೇಳೆ ಎಲ್ಲಿಯಾದರೂ ಅಜಾಗರೂಕತೆಯಿಂದ ಮಾತನಾಡಿದರೆ ಅಥವಾ ಆಕ್ಷೇಪಾರ್ಹ ಮಾಹಿತಿಗಳನ್ನು ಹಂಚಿಕೊಂಡರೆ ಅದನ್ನು ಮುಂದಿಟ್ಟುಕೊಂಡು ಕಾಂಗ್ರೆಸ್ ಪಕ್ಷದ ಮರ್ಯಾದೆಯನ್ನು ಮೂರಾಬಟ್ಟೆ ಮಾಡುವ ಸಂಚುಗಳು ನಡೆದಿವೆ. ಈ ವಿಚಾರವಾಗಿ ಪ್ರತಿ ಹಂತದಲ್ಲೂ ಜಾಗ್ರತೆವಹಿಸಬೇಕು ಎಂದು ಮುಖ್ಯಮಂತ್ರಿಯವರು ಸಲಹೆ ನೀಡಿದ್ದಾರೆ.

ಇನ್ನೂ ಕೆಲವು ಸಚಿವರಿಗೆ, ಶಾಸಕರಿಗೆ ಹನಿ ಟ್ರ್ಯಾಪ್‌ನ ಜಾಲಗಳು ಬೆನ್ನು ಬಿದ್ದಿವೆ. ವಿವಾಹೇತರ ಸಂಬಂಧಗಳ ವಿಷಯದಲ್ಲಿ ಯಾರೂ ಕೂಡ ಜಾಲಕ್ಕೆ ಸಿಲುಕಬಾರದು. ಅಪರಿಚಿತ ಮಹಿಳೆಯರು ಹಾಗೂ ಹೆಣ್ಣು ಮಕ್ಕಳ ಜೊತೆ ಮಾತನಾಡುವಾಗ ಸೌಜನ್ಯತೆ ಮತ್ತು ಸಭ್ಯತೆ ಕಾಯ್ದುಕೊಳ್ಳಬೇಕು. ಕೆಲವು ಸಭೆ, ಸಮಾರಂಭಗಳಲ್ಲಿ ಉದ್ದೇಶ ಪೂರ್ವಕವಾಗಿಯೇ ಪ್ರಚೋದಿಸಿ ಸಹನೆಗೆಡುವಂತೆ ಮಾಡಲು ಒಂದು ತಂಡ ಪ್ರಯತ್ನಿಸಿದೆ. ಅದನ್ನು ಚಿತ್ರೀಕರಣ ಮಾಡಲು ಮತ್ತೊಂದು ತಂಡ ಕಾದು ಕುಳಿತಿರುತ್ತದೆ. ಹೀಗಾಗಿ ಸಚಿವರು ಸಾರ್ವಜನಿಕ ಜಾಗಗಳಲ್ಲಿ ಎಚ್ಚರಿಕೆ ವಹಿಸಬೇಕು ಎಂದು ಸಲಹೆ ನೀಡಿದ್ದಾರೆ. ಸಾಧ್ಯವಾದಷ್ಟು ಪೊಲೀಸ್ ಸಿಬ್ಬಂದಿಗಳು, ಅಧಿಕಾರಿಗಳ

3ನೇ ಪುಟಕ್ಕೆ

2047ರ ವೇಳೆಗೆ ವಿಕಸಿತ ಭಾರತ ನಿರ್ಮಾಣಕ್ಕೆ ಮೋದಿ ಹೊಸ ಘೋಷವಾಕ್ಯ

❏ ನೈಜ್ಯ ದೆಸೆ ನ್ಯೂಸ್

ನವದೆಹಲಿ: ಪ್ರಜಾಸತ್ತಾತ್ಮಕ ವ್ಯವಸ್ಥೆಯಲ್ಲಿ ಸಾರ್ವಜನಿಕ ಸೇವೆಯಲ್ಲಿ 25 ವರ್ಷಗಳನ್ನು ಪೂರೈಸಿರುವ ಪ್ರಧಾನಿ ನರೇಂದ್ರ ಮೋದಿ ಅವರು ದೇಶದ ಸಂವಿಧಾನ ಮತ್ತು ಪ್ರಜಾಪ್ರಭುತ್ವಕ್ಕೆ ಗೌರವ ಸಲ್ಲಿಸಿದ್ದಾರೆ. ದೆಹಲಿಯಲ್ಲಿ ಆಯೋಜಿಸಿದ್ದ 'ಸೇವಾ ಜ್ಯೋತಿ' ಕಾರ್ಯಕ್ರಮವನ್ನು ಉದ್ದೇಶಿಸಿ ಮಾತನಾಡಿದ ಅವರು, 2047ರ ವೇಳೆಗೆ ಭಾರತವನ್ನು ಅಭಿವೃದ್ಧಿ ಹೊಂದಿದ ರಾಷ್ಟ್ರವನ್ನಾಗಿ (ವಿಕಸಿತ ಭಾರತ) ನಿರ್ಮಿಸುವ ಸಂಕಲ್ಪವನ್ನು ಪುನರುಚ್ಚರಿಸಿದರು. ಈ ಗುರಿಯನ್ನು ಸಾಧಿಸುತ್ತೇವೆ ಎಂಬ ಹೊಸ ಮಂತ್ರವನ್ನು ದೇಶದ ಜನತೆಗೆ ನೀಡಿದರು.

ಸಾರ್ವಜನಿಕ ಜೀವನದಲ್ಲಿ 25 ವರ್ಷಗಳ ಸುದೀರ್ಘ ಅಧಿಕಾರಾವಧಿ ಮತ್ತು ಅನುಭವವನ್ನು ಸ್ಮರಿಸಿದ ಪ್ರಧಾನಿ, 'ಸೇವಾ ಜ್ಯೋತಿ' ಯಾತ್ರೆಯಲ್ಲಿ ಭಾಗವಹಿಸಿದ ಪ್ರತಿಯೊಬ್ಬ ನಾಗರಿಕರಿಗೂ ಕೃತಜ್ಞತೆ ಸಲ್ಲಿಸಿದರು. ಪ್ರಜಾಪ್ರಭುತ್ವ ಮತ್ತು ಸಂವಿಧಾನಕ್ಕೆ ಗೌರವ ಸಲ್ಲಿಸಿದ ಮೋದಿ, ಜನರು ಹಲವು ಬಾರಿ ತಮ್ಮನ್ನು ಸಾರ್ವಜನಿಕ ಸೇವೆಗೆ ಆಯ್ಕೆ ಮಾಡಿರುವುದು ತಮ್ಮ



ಜೀವನದ ಮಹತ್ವದ ಅನುಭವವಾಗಿದೆ ಎಂದರು. 'ಜನರು ಯಾವಾಗಲೂ ನನ್ನನ್ನು ಅವರ ಸೇವೆ ಮಾಡಲು ಆಯ್ಕೆ ಮಾಡಿಕೊಂಡಿದ್ದಾರೆ' ಎಂದು ಹೇಳಿದ ಅವರು, ತಮ್ಮ 25 ವರ್ಷಗಳ ಸಾರ್ವಜನಿಕ ಜೀವನವನ್ನು ವೈಯಕ್ತಿಕ ಸಾಧನೆಯಾಗಿ ನೋಡುವುದಕ್ಕಿಂತ ದೇಶ ನೀಡಿದ ಅವಕಾಶ ಮತ್ತು ಜವಾಬ್ದಾರಿಯಾಗಿ ಪರಿಗಣಿಸುವುದಾಗಿ ಹೇಳಿದರು.

ಸೇವಾ ಜ್ಯೋತಿ ಕಾರ್ಯಕ್ರಮ 2001ರಲ್ಲಿ ಗುಜರಾತ್ ಮುಖ್ಯಮಂತ್ರಿಯಾಗಿ ಅಧಿಕಾರ ಸ್ವೀಕರಿಸಿದ ದಿನದಿಂದ ಪ್ರಸ್ತುತ ಪ್ರಧಾನಿಯಾಗಿ ದೇಶವನ್ನು ಮುನ್ನಡೆಸುತ್ತಿರುವವರೆಗಿನ 25 ವರ್ಷಗಳ ಸಾರ್ವಜನಿಕ ಸೇವೆಯನ್ನು ಸ್ಮರಿಸಲು 'ಸೇವಾ ಜ್ಯೋತಿ' ಕಾರ್ಯಕ್ರಮವನ್ನು ಆಯೋಜಿಸಲಾಗಿತ್ತು. 'ನನ್ನ 25 ವರ್ಷಗಳ ಸಾರ್ವಜನಿಕ ಸೇವೆಯ ಅನುಭವ ಕೇವಲ ಮೋದಿಗೆ ಮಾತ್ರ ಸೇರಿದ್ದಲ್ಲ; ಅದು ಇಡೀ ರಾಷ್ಟ್ರಕ್ಕೆ ಸೇರಿದ ಅಗಾಧ ಆಸ್ತಿಯಾಗಿದೆ. ಭಾರತ ಮಾತೆಯ ಪ್ರತಿಯೊಬ್ಬ ಮಗುವೂ ಈ ಆಸ್ತಿಗೆ ಅರ್ಹರು' ಎಂದು ಪ್ರಧಾನಿ ಹೇಳಿದರು.

2047ರ ವೇಳೆಗೆ ವಿಕಸಿತ ಭಾರತ ನಿರ್ಮಾಣ, ಆತ್ಮನಿರ್ಭರ ಭಾರತ ಸಾಕಾರ, ಭಾರತವನ್ನು ಜಾಗತಿಕ ಉತ್ಪಾದನಾ ಕೇಂದ್ರವನ್ನಾಗಿ ಮಾಡುವುದು, ಒಲಿಂಪಿಕ್ಸ್ ಕ್ರೀಡಾಕೂಟದ ಆತಿಥ್ಯ ವಹಿಸುವುದು ಹಾಗೂ ಬಾಹ್ಯಾಕಾಶ ಕ್ಷೇತ್ರದಲ್ಲಿ ಹೊಸ ಮೈಲಿಗಲ್ಲುಗಳನ್ನು ಸ್ಥಾಪಿಸುವುದು ಸೇರಿದಂತೆ ಪ್ರಮುಖ ರಾಷ್ಟ್ರೀಯ ಗುರಿಗಳನ್ನು ಪ್ರಧಾನಿ ಉಲ್ಲೇಖಿಸಿದರು. ಈ ಎಲ್ಲ ಗುರಿಗಳನ್ನು ಸಾಧಿಸುವುದಾಗಿ ಸಭೆಯಲ್ಲಿ ನೆರೆದಿದ್ದ ಜನರು ಸಂಕಲ್ಪ ಮಾಡಿದರು. 'ದೇಶ ನನಗೆ ಬಹಳಷ್ಟು ನೀಡಿದೆ. ಹೀಗಾಗಿ ರಾಷ್ಟ್ರದ ಕಡೆಗೆ ನನ್ನ ಜವಾಬ್ದಾರಿಯೂ ಅಷ್ಟೇ ದೊಡ್ಡದಾಗಿದೆ. ಪ್ರತಿಯೊಬ್ಬ ನಾಗರಿಕನೂ ನನ್ನ ಸೇವೆಯ ಮೇಲೆ ಸಂಪೂರ್ಣ ಹಕ್ಕನ್ನು ಹೊಂದಿದ್ದಾನೆ' ಎಂದು ಮೋದಿ ಒತ್ತಿ ಹೇಳಿದರು.

ದೇವಸ್ಥಾನ ಭೇಟಿ, ಪ್ರಾರ್ಥನೆ ಭಾಷಣಕ್ಕೂ ಮುನ್ನ ಬೆಳಿಗ್ಗೆ ಶ್ರೀ ವಿನಾಯಕ ದೇವಸ್ಥಾನಕ್ಕೆ ಭೇಟಿ ನೀಡಿದ ಪ್ರಧಾನಿ ಮೋದಿ, ದೇಶದ 140 ಕೋಟಿ ಜನರ ಕಲ್ಯಾಣಕ್ಕಾಗಿ ಹಾಗೂ ದೇಶ ಸೇವೆಯನ್ನು ಇನ್ನಷ್ಟು ಹೆಚ್ಚಿನ ಶಕ್ತಿ ಮತ್ತು ಸಾಮರ್ಥ್ಯದೊಂದಿಗೆ ಮುಂದುವರಿಸಲು ಶಕ್ತಿ ನೀಡುವಂತೆ ಪ್ರಾರ್ಥಿಸಿದರು. ತಮ್ಮ ಸುದೀರ್ಘ ಸಾರ್ವಜನಿಕ ಸೇವಾ ಪ್ರಯಾಣದಲ್ಲಿ ಲಕ್ಷಾಂತರ ಸ್ವಯಂಸೇವಕರು ಮತ್ತು ಕಾರ್ಯಕರ್ತರ ನಿಸ್ವಾರ್ಥ ಸೇವೆಯನ್ನು ಸ್ಮರಿಸಿದ ಪ್ರಧಾನಿ, 'ನಾವು ಮಾನವೀಯತೆಯ ಸೇವಕರು' ಎಂಬ ಮನೋಭಾವದಿಂದ ಶ್ರಮಿಸಿದ ಸ್ವಯಂಸೇವಕರಿಂದಾಗಿ ತಾವು ಎಂದಿಗೂ ಒಂಟಿಯಾಗಿರುವಂತೆ ಭಾವಿಸಿಲ್ಲ ಎಂದು ಕೃತಜ್ಞತೆ ಸಲ್ಲಿಸಿದರು.

ಈ ಸಂದರ್ಭದಲ್ಲಿ 'ಸೇವಾ ಜ್ಯೋತಿ' ಯಾತ್ರೆಯಲ್ಲಿ ಭಾಗವಹಿಸಿದ ನಾಗರಿಕರಿಗೆ ಕೃತಜ್ಞತೆ ಸಲ್ಲಿಸಿದ ಪ್ರಧಾನಿ, ಸಾರ್ವಜನಿಕ ಹುದ್ದೆಯನ್ನು ಅಧಿಕಾರದ ಸ್ಥಾನಕ್ಕಿಂತ ಜವಾಬ್ದಾರಿಯ ಸ್ಥಾನವೆಂದು ಪರಿಗಣಿಸಿರುವುದಾಗಿ ತಿಳಿಸಿದರು. ದೇಶ ತನಗೆ ಬಹಳಷ್ಟು ನೀಡಿರುವುದರಿಂದ ರಾಷ್ಟ್ರದ ಮೇಲಿನ ತನ್ನ ಜವಾಬ್ದಾರಿಯೂ ದೊಡ್ಡದಾಗಿದೆ ಎಂಬ ಸಂದೇಶವನ್ನು ನೀಡಿದರು.

ಸಾಹಿತ್ಯ ಸಿಂಚನ

ಹೇಳಲಾಗದ ಮಾತುಗಳು

ಹೇಳಲಾಗದ ಮಾತುಗಳು
ಮನದೊಳಗೆ ಉಳಿದವು,ಮೌನದ ನೆರಳಲ್ಲಿ
ಭಾವನೆಗಳು ಕರಗಿದವು.
ತುಟಿಗಳಂಚಿಗೆ ಬಂದ ಪದಗಳು ನಿಂತವು,ಕಣ್ಣಿನ
ಭಾಷೆಯಲ್ಲಿ ಕಥೆಗಳು ಮೂಡಿದವು.

ಹೇಳಬೇಕೆಂದರೂ ಧೈರ್ಯವೊಂದು ಸಾಲಲಿಲ್ಲ,
ಮನದ ನೋವನ್ನು ಯಾರಿಗೂ ಹೇಳಲಾಗಲಿಲ್ಲ.
ನಗುವಿನ ಹಿಂದೆ ಕಣ್ಣೀರು ಅಡಗಿಸಿಕೊಂಡೆ,
ಮೌನದೊಳಗೆ ಸಾವಿರ ಮಾತು ಬಚ್ಚಿಟ್ಟೆ.

ಕೇಳುವವರಿದ್ದರೂ ಹೇಳಲಾಗದ ನೋವು,
ಅರ್ಥಮಾಡಿಕೊಳ್ಳುವವರಿಲ್ಲದ ಏಕಾಂತ ಭಾವು.
ಒಂದು ಮಾತು ಸಾಕಿತ್ತು ಮನ ಹಗುರವಾಗಲು,
ಆದರೆ ಮೌನವೇ ಕಲಿಸಿತು ನೋವು ಸಹಿಸಲು.

ಹಳೆಯ ನೆನಪುಗಳು ಮತ್ತೆ ಮತ್ತೆ ಕಾಡಿದವು,
ಹೇಳದ ಭಾವನೆಗಳು ಹೃದಯದಲ್ಲಿ ಉಳಿದವು.
ಕಾಲ ಕಳೆದರೂ ಆ ಮಾತುಗಳು ಮಾಸಲಿಲ್ಲ,
ಮನದ ಪುಟಗಳಲ್ಲಿ ಅವು ಎಂದಿಗೂ ಅಳಿಸಲಿಲ್ಲ.

ಒಮ್ಮೆ ಹೇಳಬಹುದಾದರೆ ಎಲ್ಲವನ್ನೂ ಹೇಳುವೆ,
ಮೌನದ ಗೋಡೆಯನ್ನು ನಿಧಾನವಾಗಿ ಒಡೆಯುವೆ.
ಹೇಳಲಾಗದ ಮಾತುಗಳಿಗೂ ಒಂದು ಅರ್ಥವಿದೆ,
ಅವುಗಳ ಹಿಂದೆ ಮೌನವಾದ ಒಂದು ಹೃದಯವಿದೆ.

ಗಗನಕ್ಕೇರಿದ ತರಕಾರಿ-ಸೊಪ್ಪಿನ ಬೆಲೆ : ಸೆಂಚುರಿಯತ್ತ ಬೀನ್ಸ್, ಕಣ್ಣೀರು ತರಿಸುತ್ತಿರುವ ಈರುಳ್ಳಿ

❑ ನೈಜ್ಯ ದೆಸೆ ನ್ಯೂಸ್

ತುಮಕೂರು: ಕಳೆದ ಒಂದು ವಾರದಿಂದ ತರಕಾರಿ ಹಾಗೂ ಸೊಪ್ಪಿನ ಬೆಲೆ ಗಣನೀಯವಾಗಿ ಏರಿಕೆಯಾಗುತ್ತಿದ್ದು, ಬೀನ್ಸ್ ಶತಕ ಭಾರಿಸಿದ್ದು, ಗ್ರಾಹಕರ ಜೇಬಿಗೆ ಕತ್ತರಿ ಬಿದ್ದಂತಾಗಿದೆ.ಟೊಮ್ಯಾಟೊ, ಬೀನ್?ಸ, ಕ್ಯಾರೆಟ್, ಸೊಪ್ಪು ಸೇರಿದಂತೆ ಹಲವು ತರಕಾರಿಗಳ ಬೆಲೆ ಕಳೆದ ಒಂದು ವಾರದಿಂದ ಏರಿಕೆಯಾಗುತ್ತಿದ್ದು, ಅಡುಗೆ ಮನೆ ಬಜೆಟ್ ದುಪ್ಪಟ್ಟಾಗುತ್ತಿದೆ.



ರಾಜ್ಯದ ವಿವಿಧೆಡೆ ಕಳೆದ ಕೆಲವು ದಿನಗಳಿಂದ ಮಳೆಯಾಗುತ್ತಿದ್ದು, ಬೆಳೆ ಮೇಲೆ ಪರಿಣಾಮ ಬೀರಿದ್ದು ಬೆಲೆ ಏರಿಕೆಗೆ ಕಾರಣವಾಗಿದೆ.ಇನ್ನೂ ಕೆಲವೆಡೆ ಬರದಿಂದ ಸಹ ನೀರಿನ ಕೊರತೆ ಉಂಟಾಗಿ ಉತ್ಪಾದನೆ ಕುಂಠಿತವಾಗಿ ಬೆಲೆ ಹೆಚ್ಚಳವಾಗಿದೆ.25 ದಿನಗಳ ಹಿಂದೆ ಇದ್ದ ಟೊಮ್ಯಾಟೊ ದರ ದಿಢೀರನೇ ಕೆಜಿಗೆ 50 ರೂ.ಗೆ ಏರಿಕೆಯಾಗಿದ್ದರೆ, ಬೀನ್ಸ್ ಕೂಡಾ 70 ರೂ.ಗಳಿಂದ 100 ರೂ.ವರೆಗೂ ಏರಿಕೆಯಾಗಿದೆ. ಸೌತೆಕಾಯಿ 40-45 ರೂ., ಬೆಂಡೇಕಾಯಿ 50 ರೂ., ತೊಂಡೇಕಾಯಿ-40 ರೂ., ಮೈಸೂರು ಬದನೇಕಾಯಿ 50 ರೂ., ಕ್ಯಾಪ್ಸಿಕಂ 60 ರೂ., ಮೂಲಂಗಿ 50 ರೂ., ನವಿಲುಕೋಸು 50 ರೂ., ಬೀಟ್‌ರೋಟ್- 50 ರೂ., ಹೀರೇಕಾಯಿ 50 ರೂ. ಗಳಿಗೆ ಮಾರಾಟವಾಗುತ್ತಿದೆ. ಅದೇ ರೀತಿ ಮೆಂತ್ಯೆ ಸೊಪ್ಪು ಕಟ್ಟಿಗೆ 80 ರೂ., ದಂಟು 50 ರೂ., ಸಬ್ಬಕ್ಕಿ 60 ರೂ., ಪಾಲಾಕ್ 70 ರೂ., ನಾಟಿ ಕೊತ್ತಂಬರಿ ಸೊಪ್ಪು 100 ರೂ.ಗಳಿಗೆ ಏರಿಕೆಯಾಗಿದೆ.

ಕಣ್ಣೀರು ತರಿಸುತ್ತಿದೆ ಈರುಳ್ಳಿ ಬೆಲೆ :

ಕಳೆದ ಕೆಲವು ದಿನದಿಂದ ದಿನಕ್ಕೆ ಈರುಳ್ಳಿ ಬೆಲೆ ಏರುತ್ತಲೇ ಇದೆ. ಗುಣಮಟ್ಟದ ಈರುಳ್ಳಿ ಕೆಜಿಗೆ 70 ರೂ.ಗಳಿಂದ 80 ರೂ.ಗೆ ಮಾರಾಟವಾಗುತ್ತಿದೆ. ಹೆಚ್ಚಾಗಿ ಈರುಳ್ಳಿ ಬೆಳೆಯುವ ಪ್ರದೇಶಗಳಾದ ಬಳ್ಳಾರಿ, ರಾಯಚೂರು, ಬಿಜಾಪುರ, ದಾವಣಗೆರೆ, ಹುಬ್ಬಳ್ಳಿ, ಧಾರವಾಡದಲ್ಲಿ ಮಳೆ ಕೊರತೆಯಿಂದಾಗಿ ನಿರೀಕ್ಷಿತ ಪ್ರಮಾಣದಲ್ಲಿ ಮಾರುಕಟ್ಟೆಗೆ ಮಾಲು ಬಾರದಿರುವುದರಿಂದ ಬೆಲೆ ಹೆಚ್ಚಳವಾಗಿದೆ. ಮತ್ತೊಂದೆಡೆ ಮಹಾರಾಷ್ಟ್ರದಲ್ಲೂ ಸಹ ಇಳುವರಿ ಕುಂಠಿತವಾಗಿ ಬೆಲೆ ಹೆಚ್ಚಳಕ್ಕೆ ಕಾರಣವಾಗಿದೆ. ಈ ಬಾರಿ ಮುಂಗಾರು ಮಳೆ ನಿರೀಕ್ಷಿತ ಪ್ರಮಾಣದಲ್ಲಿ ಬಾರದ ಪರಿಣಾಮ ವಾತಾವರಣದಲ್ಲಿ ಉಷ್ಣಾಂಶ ಏರಿಕೆಯಾಗಿ ಕೃಷಿ ಹಾಗೂ ತೋಟಗಾರಿಕಾ ಬೆಳೆಗಳ ಮೇಲೆ ದೊಡ್ಡ ಪ್ರಮಾಣದಲ್ಲಿ ಹೊಡೆತ ಬಿದ್ದಿದ್ದು, ಬೆಳೆಹಾನಿ ಹಾಗೂ ಇಳುವರಿ ಕುಂಠಿತದಿಂದ ಬೆಲೆ ಏರಿಕೆಯಾಗಿದೆ. ಒಟ್ಟಾರೆ ಅಗತ್ಯ ವಸ್ತುಗಳ ಬೆಲೆ ಏರಿಕೆಯಿಂದ ಮಧ್ಯಮ ವರ್ಗದವರ ಜೀವನ ದಿನದಿಂದ ದಿನಕ್ಕೆ ದುಪ್ಪಟ್ಟಾಗುತ್ತಿದೆ.

ನೈಜ್ಯ ದೆಸೆ
ಕನ್ನಡ ದಿನಪತ್ರಿಕೆಯನ್ನು ತಪ್ಪದೆ ಓದಿರಿ.

ತಂಜಿಮುಲ್ ಮುಸ್ಲಿಮೀನ್ ಕಮಿಟಿ ನೋಂದಣಿ ರದ್ದುಪಡಿಸುವ ಕುರಿತು ವಿಚಾರಣೆಗೆ ಸೂಚನೆ


ರಾಯಚೂರು ಸಹಕಾರ ಸಂಘಗಳ ಉಪನಿಬಂಧಕರಿಂದ ವಿಚಾರಣೆ ನಡೆಸಲು ಹಿರಿಯ ಸಹಕಾರ ಸಂಘಗಳ ನಿರೀಕ್ಷಕ ಗಂಗಪ್ಪ ನೇಮಕ

❑ ನೈಜ್ಯ ದೆಸೆ ನ್ಯೂಸ್

ಲಿಂಗಸೂಗೂರು: ತಂಜಿಮುಲ್ ಮುಸ್ಲಿಮೀನ್ ಕಮಿಟಿಯ ನೋಂದಣಿ ರದ್ದುಪಡಿಸುವಂತೆ ಸಲ್ಲಿಸಲಾಗಿರುವ ದೂರಿನ ಅರ್ಜಿಯ ಕುರಿತು ವಿಚಾರಣೆ ನಡೆಸಲು ಲಿಂಗಸೂಗೂರು ಸಹಕಾರ ಸಂಘಗಳ ಹಿರಿಯ ನಿರೀಕ್ಷಕರಾದ ಗಂಗಪ್ಪ ಅವರನ್ನು ದಿನಾಂಕ : 05.10.2026 ರಂದು ನೇಮಿಸಿ ಆದೇಶ ಹೊರಡಿಸಿದ್ದಾರೆ.

ಅರ್ಜಿದಾರರಾದ ಶ್ರೀ ಅನ್ವರುದ್ದೀನ್ ತಂದೆ ಲಾಲ್‌ಮೊಹಮ್ಮದ್ ಸಾಬ್ ಹಾಗೂ ತಾಲ್ಲೂಕು ಅಧ್ಯಕ್ಷರಾದ ಶ್ರೀ ಹುಸೇನಬಾಷಾ ತಂದೆ ಖಾಜಾ ಹುಸೇನ್ ಅವರು ತಂಜಿಮುಲ್ ಮುಸ್ಲಿಮೀನ್ ಕಮಿಟಿಯ ನೋಂದಣಿಯನ್ನು ರದ್ದುಪಡಿಸುವ ಕುರಿತು ರಾಯಚೂರು ಸಹಕಾರ ಸಂಘಗಳ ಉಪನಿಬಂಧಕರಿಗೆ ದೂರು/ಮನವಿ ಸಲ್ಲಿಸಿದ್ದರು.

ಸದರಿ ದೂರಿನಲ್ಲಿರುವ ಆಕ್ಷೇಪಣೆಗಳಿಗೆ ಸಂಬಂಧಿಸಿದಂತೆ ದೂರುದಾರರು ಹಾಗೂ ಎದುರು ದೂರುದಾರರ ಸಮಕ್ಷಮದಲ್ಲಿ ವಿಚಾರಣೆ ನಡೆಸಿ



ಕರ್ನಾಟಕ ಸರ್ಕಾರ
(ಸಹಕಾರ ಇಲಾಖೆ)
ಸಹಕಾರ ಸಂಘಗಳ ಉಪ ನಿಬಂಧಕರವರ ಕಾರ್ಯಾಲಯ, ರಾಯಚೂರು ಜಿಲ್ಲೆ, ರಾಯಚೂರು
ಕಛೇರಿಯ ವಿಳಾಸ: ಮನೆ ನಂ.1-11-38/50, ಲಿಂಗಸೂಗೂರು ರಸ್ತೆ, ಬಸವೇಶ್ವರ ಕಾಲೋನಿ, ರಾಯಚೂರು.
ಕಛೇರಿಯ ಇ-ಮೇಲ್ ವಿಳಾಸ: drcs-raichur-ka@nic.in ದೂರವಾಣಿ ಸಂಖ್ಯೆ. 08532-221665
ದಿನಾಂಕ:05.10.2026

ನಿಮ್ಮ ವಿಶ್ವಾಸಿ,
ಸಹಿ/-
ಸಹಕಾರ ಸಂಘಗಳ ಉಪ ನಿಬಂಧಕರು
ರಾಯಚೂರು ಜಿಲ್ಲೆ,ರಾಯಚೂರು

ಏಳು ದಿನಗಳೊಳಗಾಗಿ ವರದಿ ಸಲ್ಲಿಸುವಂತೆ ರಾಯಚೂರು ಸಹಕಾರ ಸಂಘಗಳ ಸಹಾಯಕ ನಿಬಂಧಕರಿಗೆ ಈ ಹಿಂದೆ ಸೂಚಿಸಲಾಗಿತ್ತು.

ಆದರೆ, ಸಂಬಂಧಪಟ್ಟ ಸಂಸ್ಥೆಯ ಸದಸ್ಯರು ಅಥವಾ ಕಮಿಟಿಯಲ್ಲಿ ತಮ್ಮ ವೈಯಕ್ತಿಕ ಸಂಬಂಧಿಕರು ಇರುವುದರಿಂದ ವಿಚಾರಣೆಯನ್ನು ಸಂಪೂರ್ಣ ಪಾರದರ್ಶಕವಾಗಿ ನಡೆಸಲು ಕಷ್ಟವಾಗಬಹುದು ಎಂದು ರಾಯಚೂರು ಸಹಾಯಕ ನಿಬಂಧಕರು ಮೇಲಧಿಕಾರಿಗಳಿಗೆ ಪತ್ರದ ಮೂಲಕ ತಿಳಿಸಿ, ವಿಚಾರಣೆಗಾಗಿ ಬೇರೆ ಅಧಿಕಾರಿಯನ್ನು ನೇಮಿಸುವಂತೆ ಮನವಿ ಮಾಡಿದ್ದರು.

ಈ ಹಿನ್ನೆಲೆಯಲ್ಲಿ ಇದೀಗ ಸದರಿ ದೂರು/ಮನವಿಯನ್ನು ಲಗತ್ತಿಸಿ, ದೂರಿನಲ್ಲಿ ಆಕ್ಷೇಪಿಸಿರುವ ಅಂಶಗಳ ಕುರಿತು ದೂರುದಾರರು ಹಾಗೂ ಎದುರು ದೂರುದಾರರ ಸಮಕ್ಷಮದಲ್ಲಿ ವಿಚಾರಣೆ ನಡೆಸಿ, ಏಳು ದಿನಗಳೊಳಗಾಗಿ ವರದಿಯನ್ನು ಸಲ್ಲಿಸುವಂತೆ ಲಿಂಗಸೂಗೂರು ಸಹಕಾರ ಸಂಘಗಳ ಹಿರಿಯ ನಿರೀಕ್ಷಕರಾದ ಗಂಗಪ್ಪ ಅವರಿಗೆ ರಾಯಚೂರು ಸಹಕಾರ ಸಂಘಗಳ ಉಪನಿಬಂಧಕರು ಸೂಚಿಸಿದ್ದಾರೆ.

ಈ ಕುರಿತು ಅಂಜುಮನ್-ಎ-ಮುಸ್ಲಿಮೀನ್ ಲಿಂಗಸೂಗೂರು ತಾಲೂಕು ಕಮಿಟಿಯ ಗೌರವಾಧ್ಯಕ್ಷರಾದ ಅನ್ವರುದ್ದೀನ್ ಮಾತನಾಡಿ, "ನಾವು ಸಂಬಂಧಪಟ್ಟ ಅಧಿಕಾರಿಗಳಿಗೆ ನೀಡಿರುವ ದೂರಿನಲ್ಲಿರುವ ಪ್ರತಿಯೊಂದು ಅಂಶದ ಕುರಿತು ನಿಷ್ಪಕ್ಷಪಾತ ಹಾಗೂ ಪಾರದರ್ಶಕ ವಿಚಾರಣೆ ನಡೆಯಬೇಕು ಎಂಬುದು ನಮ್ಮ ಪ್ರಮುಖ ಬೇಡಿಕೆಯಾಗಿದೆ.

ಇದೀಗ ವಿಚಾರಣೆ ನಡೆಸಲು ಹಿರಿಯ ಸಹಕಾರ ಸಂಘಗಳ ನಿರೀಕ್ಷಕರಾದ ಗಂಗಪ್ಪ ಅವರನ್ನು ನೇಮಿಸಿರುವುದನ್ನು ಸ್ವಾಗತಿಸುತ್ತೇವೆ. ದೂರುದಾರರು ಹಾಗೂ ಎದುರು ದೂರುದಾರರ ಸಮಕ್ಷಮದಲ್ಲಿ ದಾಖಲೆಗಳನ್ನು ಪರಿಶೀಲಿಸಿ, ತಂಜಿಮುಲ್ ಮುಸ್ಲಿಮೀನ್ ಕಮಿಟಿಯ ನೋಂದಣಿ ದಾಖಲೆಗಳು, ಬೈಲಾ ನಿಯಮಗಳು ಹಾಗೂ ದೂರಿನಲ್ಲಿ ಉಲ್ಲೇಖಿಸಿರುವ ಅಂಶಗಳ ಬಗ್ಗೆ ಸಮಗ್ರ ವಿಚಾರಣೆ ನಡೆಸಬೇಕು. ಏಳು ದಿನಗಳೊಳಗೆ ವಾಸ್ತವಾಂಶಗಳ ಆಧಾರದ ಮೇಲೆ ವರದಿ ಸಲ್ಲಿಸಬೇಕು. ಯಾವುದೇ ನಿಯಮ ಉಲ್ಲಂಘನೆ ದೃಢಪಟ್ಟಲ್ಲಿ ಕಾನೂನು ಪ್ರಕಾರ ಸೂಕ್ತ ಕ್ರಮ ಕೈಗೊಳ್ಳಬೇಕು," ಎಂದು ಒತ್ತಾಯಿಸಿದರು. ವಿಚಾರಣೆಯ ನಂತರ ಸಲ್ಲಿಕೆಯಾಗುವ ವರದಿಯ ಆಧಾರದ ಮೇಲೆ ಮುಂದಿನ ಕ್ರಮ ಕೈಗೊಳ್ಳುವ ಸಾಧ್ಯತೆ ಇದೆ.

ಕಾರುಣ್ಯಾಶ್ರಮವು ನಮ್ಮ ಕರುನಾಡಿನ ಕರುಣಾಮಯಿ ಕುಟುಂಬವಾಗಿದೆ - ಮಹಾಂತೇಶ ನಾಯಕ

❑ ನೈಜ್ಯ ದೆಸೆ ನ್ಯೂಸ್

ಸಿಂಧನೂರು: ಮಹಾಂತೇಶ ನಾಯಕ ಗೆಳೆಯರ ಬಳಗ ಮಸ್ಕಿ ಹಾಗೂ ಸಿಂಧನೂರು ಇವರುಗಳ ಸಹಯೋಗದಲ್ಲಿ ಮಸ್ಕಿ ವಿಧಾನಸಭಾ ಕ್ಷೇತ್ರದ ಯುವ ಮುಖಂಡರು ಹಾಗೂ ಸಮಾಜ ಸೇವಕರಾದ ಮಹಾಂತೇಶ ನಾಯಕ ಇವರ 27ನೇ ವರ್ಷದ ಜನ್ಮ ಸಾರ್ಥಕ ದಿನವನ್ನು ಸಿಂಧನೂರು ನಗರದ ಒಳ ಬಳ್ಳಾರಿ ರಸ್ತೆಯಲ್ಲಿರುವ ಕರ್ನಾಟಕ ಸರ್ಕಾರದ ರಾಜ್ಯ ಪ್ರಶಸ್ತಿ ಪುರಸ್ಕೃತ ಸಂಸ್ಥೆ ಯಾದ ಶ್ರೀಮಠ ಸೇವಾ ಟ್ರಸ್ಟ್ (ರಿ)ಹರೇಟನೂರು ಕಾರುಣ್ಯ ನೆಲೆ ವೃದ್ಧಾಶ್ರಮ ಹಾಗೂ ವಯಸ್ಕರ ಬುದ್ಧಿಮಾಂದ್ಯ ಆಶ್ರಮದಲ್ಲಿ ಆಶ್ರಮವಾಸಿಗಳಿಗೆ ಹೊಸ ಬಟ್ಟೆ ವಿತರಣೆ ಹಾಗೂ ಮಹಾಪ್ರಸಾದ ಸೇವೆ ಹಣ್ಣು ಹಂಪಲುಗಳನ್ನು ವಿತರಿಸುವ ಮೂಲಕ ಅರ್ಥಪೂರ್ಣವಾಗಿ ನೆರವೇರಿಸಿದರು.

ಈ ಕಾರ್ಯಕ್ರಮದಲ್ಲಿ ಆಶ್ರಮದ ಕಾರ್ಯಾಧ್ಯಕ್ಷರಾದ ಡಾ. ಚನ್ನಬಸವ ಸ್ವಾಮಿ ಹಿರೇಮಠ ಅವರಿಂದ ಹಾಗೂ ಸಿಂಧನೂರಿನ ವಿವಿಧ ಸಂಘ-ಸಂಸ್ಥೆಗಳಿಂದ ಮಾಂತೇಶ



ನಾಯಕ ಅವರನ್ನು ಗೌರವಿಸಿ ಶುಭಕೋರಿದರು. ಈ ಕಾರ್ಯಕ್ರಮದಲ್ಲಿ ಮಹಾಂತೇಶ ನಾಯಕ ಮಾತನಾಡಿ ಈ ಕಾರುಣ್ಯ ಆಶ್ರಮದ ಸೇವೆಗೆ ಮಸ್ಕಿಯ ಎಲ್ಲ ಯುವ ಜನತೆ ಕಾರುಣ್ಯ ಆಶ್ರಮದ ಸೇವೆಯಲ್ಲಿ ಸದಾವಕಾಲ ಜೊತೆಯಾಗಿರುತ್ತದೆ.

ನಮ್ಮ ಹರೇಟನೂರಿನ ಆದಿಶಕ್ತಿ ಶ್ರೀ ದ್ಯಾವಮ್ಮ ದೇವಿಯ ಅರ್ಚಕರಾಗಿ ವೇ. ಮೂ. ಅಮರಯ್ಯ ಸ್ವಾಮಿಯವರು ಆ ತಾಯಿಗೆ ಬಂದಿರುವಂತಹ ಮಂಗಳಾರತಿ ತಟ್ಟೆ ಹಾಗೂ ದವಸ ಧಾನ್ಯಗಳು ಇಂತಹ ನೊಂದ ಜೀವಿಗಳಿಗೆ ನೆಲೆ ಇಲ್ಲದ ಜೀವಿಗಳಿಗೆ ಉಪಯೋಗವಾಗಲಿ ಎನ್ನುವ ಮಾನವೀಯತೆ ದೃಷ್ಟಿಯನ್ನಿಟ್ಟುಕೊಂಡು ಈ ಸಂಸ್ಥೆಯನ್ನು ಹುಟ್ಟು ಹಾಕಿ ಸಮಾಜದಲ್ಲಿನ ಅಂಧ-ಅನಾಥರ ಬಾಳಿಗೆ ಬೆಳಕಾಗಿದ್ದಾರೆ. ಈ ಕಾರುಣ್ಯ ಕುಟುಂಬದ ಸೇವೆಯು ನಮ್ಮೆಲ್ಲರಿಗೆ ಸ್ಫೂರ್ತಿಯಾಗಿದೆ. ನಮ್ಮ ಈ ಕಾರುಣ್ಯಾಶ್ರಮವು ನಮ್ಮ ಕರುನಾಡಿನ ಕರುಣಾಮಯಿ ಕುಟುಂಬವಾಗಿದೆ. ಈ ಆಶ್ರಮದಲ್ಲಿನ ಎಲ್ಲಾ ದೇವರುಗಳ ಆಶೀರ್ವಾದ ನಮ್ಮ ಹಾಗೂ ನಮ್ಮ ಕುಟುಂಬ ಮತ್ತು ನಮ್ಮ ಸ್ನೇಹ ಬಳಗದ ಮೇಲಿರಲಿ ಇಂದಿನ ಈ ನನ್ನ ಜನ್ಮದಿನ ಸಾರ್ಥಕ ಬದುಕಿನ ವಿಶೇಷ ದಿನವಾಗಿದೆ ಎಂದು ಮಾತನಾಡಿ ಆಶ್ರಯವಾಸಿಗಳಿಗೆ ಎಲ್ಲರಿಗೂ ಬಟ್ಟೆಗಳನ್ನು ವಿತರಿಸಿ ಆಶೀರ್ವಾದ ಪಡೆದುಕೊಂಡರು. ಈ ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಗಳಾಗಿ ಶರಣಬಸವ ನಾಗರಬೆಂಚಿ ಬಿ.ಜೆ.ಪಿ. ಯುವ ಮುಖಂಡರು ಮಸ್ಕಿ ವಿಧಾನಸಭಾ ಕ್ಷೇತ್ರ ಮಸ್ಕಿ. ದುರುಗೇಶ ಜವಳಗೇರಾ. ಶ್ರೀಕಾಂತ.

ಉದಯಕುಮಾರ. ವೆಂಕಟೇಶ ನಾಗರಾಜ ಹಾಗೂ ಆಶ್ರಮದ ಕಾರ್ಯಾಧ್ಯಕ್ಷರಾದ ಡಾ. ಚನ್ನಬಸವ ಸ್ವಾಮಿ ಹಿರೇಮಠ. ಸದಸ್ಯರಾದ ಸುಜಾತ ಹಿರೇಮಠ. ಸಿಬ್ಬಂದಿಗಳಾದ ಸಿದ್ದಯ್ಯ ಸ್ವಾಮಿ ಮರಿಯಪ್ಪ ವಿದ್ಯಾಶ್ರೀ. ಶಂಕ್ರಮ್ಮ.ಮಹಾಂತೇಶ ದೋಟಿಹಾಳ. ಶರಣು ಸ್ವಾಮಿ.ಬಸವ ಸ್ವಾಮಿ.ಹಾಗೂ ಮಹಾಂತೇಶ ನಾಯಕ ಅವರ ಸ್ನೇಹಿತರುಗಳು ಉಪಸ್ಥಿತರಿದ್ದರು.

ನಾಳಿದ್ದು 9ರಂದು ಶುಕ್ರವಾರ ಗ್ರಾಮೀಣ ಪತ್ರಕರ್ತ ತಾಂಡವಪುರ ಟಿಕೆ ಬಸವರಾಜು ಅವರಿಗೆ 2025 ನೇ ಸಾಲಿನ ಸುತ್ತೂರು ಮಠದ ಶ್ರೀ ಶಿವರಾತ್ರಿಶ್ವರ ಮಾಧ್ಯಮ ಪ್ರಶಸ್ತಿ ಪ್ರಧಾನ

❑ ನೈಜ್ಯ ದೆಸೆ ನ್ಯೂಸ್

ತಾಂಡವಪುರ: ದಕ್ಷಿಣ ಕಾಶಿ ನಂಜನಗೂಡು ತಾಲೂಕು ಪತ್ರಕರ್ತರ ಸಂಘದ ವತಿಯಿಂದ ದಿನಾಂಕ 9 ರಂದು ಶುಕ್ರವಾರ ಬೆಳಿಗ್ಗೆ 11 ಗಂಟೆಗೆ ನಂಜನಗೂಡಿನ ಶ್ರಾವಣ ಕಲ್ಯಾಣ ಮಂಟಪದಲ್ಲಿ ಪತ್ರಿಕಾ ದಿನಾಚರಣೆ ಅಂಗವಾಗಿ ಸುತ್ತೂರು ಮಠದ ಶ್ರೀ ಶಿವರಾತ್ರಿಶ್ವರ ಮಾಧ್ಯಮ ಪ್ರಶಸ್ತಿ ಪ್ರಧಾನ ಸಮಾರಂಭ ನಡೆಯಲಿದ್ದು ಸಮಾರಂಭದ ಉದ್ಘಾಟನೆಯನ್ನು ನಂಜನಗೂಡು ವಿಧಾನಸಭಾ ಕ್ಷೇತ್ರದ ಶಾಸಕ ದರ್ಶನ್ ಧ್ರುವನಾರಾಯಣ್ ರವರು ನೆರೆವೇರಿಸಲಿದ್ದು

ಮುಖ್ಯ ಅತಿಥಿಗಳಾಗಿ ಚಾಮರಾಜನಗರ ಲೋಕಸಭಾ ಕ್ಷೇತ್ರದ ಸಂಸದ ಸುನಿಲ್ ಬೋಸ್ ವಿಜಯ ಕರ್ನಾಟಕ ಪತ್ರಿಕೆ ಸ್ಥಾನಿಕ ಸಂಪಾದಕ ರಾದ ಐತಿ ಚಂಡ ರಮೇಶ್ ಉತ್ತಪ್ಪ ಮೈಸೂರು ಜಿಲ್ಲಾ ಪತ್ರಕರ್ತ ಸಂಘದ ಅಧ್ಯಕ್ಷರಾದ ಕೆ ದೀಪಕ್ ಪ್ರಧಾನ ಕಾರ್ಯದರ್ಶಿಗಳಾದ ಧರ್ಮಪುರ ನಾರಾಯಣ್ ಜಿಲ್ಲಾ ಕಾರ್ಯಕಾರಿಣಿ ಸಮಿತಿಯ ಸದಸ್ಯ ಹುಲ್ಲಹಳ್ಳಿ ಮೋಹನ್ ಹಾಗೂ ಪ್ರಶಸ್ತಿ ಪ್ರದಾನ ಮಾಡುವ ಸುತ್ತೂರು ಮಠದ ಜೆಎಸ್‌ಎಸ್ ವಿದ್ಯಾಪೀಠದ ವೈದ್ಯಕೀಯ ಶಿಕ್ಷಣ ವಿಭಾಗದ ನಿರ್ದೇಶಕರಾದ ಆರ್ ಮಹೇಶ್ ರವರು ಪ್ರಶಸ್ತಿ ಪುರಸ್ಕೃತರಾದ ಟಿ ಕೆ ಬಸವರಾಜ್ ರವರಿಗೆ ಪ್ರಧಾನ ಮಾಡಲಿದ್ದು ನಂಜನಗೂಡು ತಾಲೂಕು ಪತ್ರಕರ್ತರ ಸಂಘದ ಅಧ್ಯಕ್ಷರಾದ ಎಚ್ ಡಿ ರಂಗಸ್ವಾಮಿಯವರು ಅಧ್ಯಕ್ಷತೆ ವಹಿಸಲಿದ್ದು

ಈ ಸಮಾರಂಭಕ್ಕೆ ತಾಲೂಕು



ಪತ್ರಕರ್ತ ಸಂಘದ ಕಾರ್ಯಕಾರಿಣಿ ಸಮಿತಿಯ ಎಲ್ಲಾ ಸದಸ್ಯರು ಸಂಘದ ಸದಸ್ಯರುಗಳು ಪಾಲ್ಗೊಳ್ಳಲಿದ್ದು ಅಂದು ಗ್ರಾಮೀಣ ಪತ್ರಕರ್ತ ಟಿ ಕೆ ಬಸವರಾಜ್ ರವರು ಈ ಪ್ರಶಸ್ತಿಗೆ ಭಜನರಾಗಿದ್ದು ಅವರಿಗೆ ಪ್ರಶಸ್ತಿ ಪ್ರದಾನ ನೆರವೇರಲಿದೆ ಟಿ ಕೆ ಬಸವರಾಜು ನಡೆದು ಬಂದ ಆದಿ ಸಾಗಿದ ಬದುಕು ಪ್ರಶಸ್ತಿ ಪಡೆಯಬೇಕೆಂಬ ಛಲ ಸುತ್ತೂರು ಶ್ರೀಗಳ ಮಾಧ್ಯಮ ಪ್ರಶಸ್ತಿಯನ್ನು ಪಡೆದುಕೊಳ್ಳಬೇಕು ಎಂಬ ನನ್ನ ಕನಸನ್ನು ಮನಸು ಮಾಡಿದ ನಂಜನಗೂಡು ತಾಲೂಕು ಪತ್ರಕರ್ತ ಸಂಘದ ಅಧ್ಯಕ್ಷರು ಉಪಾಧ್ಯಕ್ಷರು ಹಾಗೂ ಸದಸ್ಯರುಗಳಿಗೆ ನಾನು ತುಂಬು ಹೃದಯದ ಧನ್ಯವಾದಗಳು ಅರ್ಪಿಸುವ ಮೂಲಕ ಸಂಘದ ಸದಸ್ಯರುಗಳಿಗೆ ಆಭಾರಿಯಾಗಿದ್ದೇನೆ

ನಾನು ಸುಮಾರು 18 ನೇ ವಯಸ್ಸಿಗೆ ಹೋರಾಟದ ಮನೋಭಾವವನ್ನು ಬೆಳೆಸಿಕೊಂಡಿದ್ದೇನೆ ಇದಕ್ಕೆ ಪ್ರೇರಣೆಯಾದವರು ರೈತ ಸಂಘದ ಪ್ರೊಫೆಸರ್ ನಂಜುಂಡಸ್ವಾಮಿ ತಾಂಡವಪುರದ ರಾಮೇಗೌಡರು ಹಳ್ಳಿ ದಿಡ್ಡಿರಘುಪತಿ ನಾಯಕರು ಬುಕ್ಕ ಹಳ್ಳಿ ಬಸವರಾಜು ಅವರು ಮೈಸೂರಿನ ಅರಸುರವರು ನನಗೆ ಪ್ರೇರಣೆಯಾದರು ಅಂದು ರೈತರ ಚಳುವಳಿಯಲ್ಲಿ ಸಕ್ರಿಯವಾಗಿ ಪಾಲ್ಗೊಂಡು ಅನ್ಯಾಯದ ವಿರುದ್ಧ ಹೋರಾಟ ಮಾಡುವ ಮೂಲಕ ಸಾರ್ವಜನಿಕರ ಸಮಸ್ಯೆಗಳಿಗೆ ನ್ಯಾಯ ದೊರಕಿಸಿಕೊಡುವುದು ಸೇರಿದಂತೆ ಇನ್ನೂ ಹಲವಾರು ಸಮಾಜಮುಖಿ ಕಾರ್ಯಕ್ರಮಗಳನ್ನು ಹೋರಾಟದ ಮೂಲಕ ಹಮ್ಮಿಕೊಂಡು ಸಾರ್ವಜನಿಕರ ಸಮಸ್ಯೆಗಳಿಗೆ ಸ್ಪಂದಿಸುವುದು

ನಮ್ಮಕಾಯಕವಾಗಿತ್ತು ನಂತರ ಹೋರಾಟವನ್ನು ಪತ್ರಿಕ ಮಾಧ್ಯಮಗಳ ಮೂಲಕ ಸಾರ್ವಜನಿಕ ಸಮಸ್ಯೆಗಳನ್ನು ಪತ್ರಿಕೆಗಳಲ್ಲಿ ಪ್ರಕಟಣೆ ಮಾಡಿ ಸರ್ಕಾರಿ ಅಧಿಕಾರಿಗಳ ಗಮನ ಸೆಳೆಯುವುದು ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳುವುದು ಪತ್ರಿಕೆ ಮೂಲಕ ನ್ಯಾಯವನ್ನು ಸಿಗುವಂತೆ ಮಾಡುವುದು ನಂತರ ಸುಮಾರು 20 ವರ್ಷಗಳ ಹಿಂದೆ ಪತ್ರಕರ್ತರ ಮೇಲೆ ದೌರ್ಜನ್ಯ ನಡೆದಾಗ ಅದನ್ನು ಖಂಡಿಸಿ ಮೈಸೂರು ಜಿಲ್ಲಾ ಪತ್ರಕರ್ತ ಸಂಘದ ಅಧ್ಯಕ್ಷರಾಗಿದ್ದ ರಾಜಶೇಖರ್ ಕೋಟಿ ಹಾಗೂ ಹಿರಿಯ ಪತ್ರಕರ್ತರಾದ ಚಂದ್ರಶೇಖರ್ ಕುಕ್ಕಿಕಟ್ಟೆ ಕೆಬಿ ಗಣಪತಿ ಅಂಶಿ ಪ್ರಸನ್ನ ಕುಮಾರ್ ರವರು ಈಗಿನ ಜಿಲ್ಲಾಧ್ಯಕ್ಷರಾದ ಕೆ ದೀಪಕ್ ರವರು ಕೆ ಶಿವಕುಮಾರ್ ರವರು ಬಾಲಕೃಷ್ಣರವರು ಈ ಪ್ರತಿಭಟನ ಮೆರವಣಿಗೆಯಲ್ಲಿ ಭಾಗವಹಿಸಿದರು ನಾನು ಕೂಡ ಚಳುವಳಿಯಲ್ಲಿ ಪಾಲ್ಗೊಂಡು ಕೆಬಿ ಗಣಪತಿಯವರಮಾತುಗಳನ್ನು ಕೇಳಿದ ಮೇಲೆ ನಾನು ಕೂಡ ಪತ್ರಿಕೆಯಲ್ಲಿ ಕೆಲಸ ಮಾಡುವ ಮೂಲಕ ಸಾರ್ವಜನಿಕ ಸಮಸ್ಯೆಗಳಿಗೆ ಸ್ಪಂದಿಸಬಹುದೆಂದು ಪತ್ರಿಕ ರಂಗಕ್ಕೆ ಬಂದೆ ರೈತ ಚಳುವಳಿಯ ಜೊತೆಗೆ ಪತ್ರಿಕೆಯನ್ನು ನಡೆಸುತ್ತಿರುವ

ರೈತ ಹೋರಾಟಗಾರ ಕಡಿದಾಳ್ ಶಾಮಣ್ಣನವರು ಸಹ ನನಗೆ ಸ್ಫೂರ್ತಿಯಾದರೂ ಮೈಸೂರು ಜಿಲ್ಲೆ, ನಂಜನಗೂಡು ತಾಲೂಕು ಚಿಕ್ಕಯ್ಯನ ಛತ್ರ ಹೋಬಳಿ ವರುಣಾ ವಿಧಾನಸಭಾ ಕ್ಷೇತ್ರಕ್ಕೆ ಸೇರುವ ತಾಂಡವಾಪುರ ಗ್ರಾಮದ ಕರಿಗೌಡ ಮಾಕಮ್ಮ ಎಂಬವರಿಗೆ ಜನಿಸಿದ ನಾನು ನನ್ನ ಹುಟ್ಟಿದ ದಿನಾಂಕ 1974 ನಾನು ಸಮಾಜದ ಅಂಕು ಡೊಂಕುಗಳನ್ನು ತಿಳಿದುಕೊಳ್ಳುವಷ್ಟು ಶಿಕ್ಷಣವನ್ನು ಪಡೆದುಕೊಂಡು ಈಗ ತಾಲೂಕು ಪತ್ರಕರ್ತರ ಸಂಘದ ಸದಸ್ಯರಾಗಲು ನನಗೆ ಸಹಕಾರ ನೀಡಿದ ಅಧ್ಯಕ್ಷರು ಉಪಾಧ್ಯಕ್ಷರು ಸದಸ್ಯರುಗಳಿಗೆ ನಾನು ಚಿರುಣಿಯಾಗಿರುತ್ತೇನೆ ನನ್ನ ಆಸೆ ಒಂದೇ ಆಗಿತ್ತು, ನಾನು ಕೂಡ ಒಂದು ದಿನ ಸುತ್ತೂರು ಶ್ರೀಗಳ ಮಾಧ್ಯಮ ಪ್ರಶಸ್ತಿಯನ್ನು ಗ್ರಾಮೀಣ ಪತ್ರಕರ್ತನಾಗಿ ಪಡೆಯಬೇಕೆಂಬ ಆಸೆ ಇತ್ತು ಆ ಆಸೆಯನ್ನು ನಮ್ಮ ಸಂಘದ ಅಧ್ಯಕ್ಷರು ಉಪಾಧ್ಯಕ್ಷರು ಸದಸ್ಯರುಗಳು ನೆರವೇರಿಸಿದ್ದಾರೆ ಅದಕ್ಕೂ ಸಹ ನಾನು ತುಂಬು ಹೃದಯದ ಧನ್ಯವಾದಗಳು ಅರ್ಪಿಸುತ್ತೇನೆ ಗ್ರಾಮೀಣ ಪತ್ರಕರ್ತ ಟಿ ಕೆ ಬಸವರಾಜು ತಾಂಡವಪುರ ನಂಜನಗೂಡು ತಾಲೂಕು ಚಿಕ್ಕಯ್ಯನ ಛತ್ರ ಹೋಬಳಿ

ಹಿರಿಯ ನಾಗರಿಕರು ಸಮಾಜದ ಬೆನ್ನೆಲುಬು ನ್ಯಾ. ಉಂಡಿ ಮಂಜುಳಾ ಶಿವಪ್ಪ

❑ ನೈಜ್ಯ ದೆಸೆ ನ್ಯೂಸ್

ಲಿಂಗಸಗೂರು: ಹಿರಿಯ ನಾಗರಿಕರು ಕೇವಲ ಮನೆಯ ಹಿರಿಯರಲ್ಲ, ಬದಲಿಗೆ ನಮ್ಮ ಸಮಾಜ ಮತ್ತು ಕುಟುಂಬದ ಅಚಲವಾದ ಬೆನ್ನೆಲುಬು ಎಂದು ಹಿರಿಯ ಶ್ರೇಣಿ ಸಿವಿಲ್ ಹಾಗೂ ಜೆ.ಎಂ.ಎಫ್.ಸಿ ನ್ಯಾಯಾಧೀಶರಾದ ಶ್ರೀಮತಿ ಉಂಡಿ ಮಂಜುಳಾ ಶಿವಪ್ಪ ಅಭಿಪ್ರಾಯಪಟ್ಟರು.

ಅವರಿಂದು ಪಟ್ಟಣದ ತಾಲ್ಲೂಕು ಪಂಚಾಯತ್ ಸಭಾಂಗಣದಲ್ಲಿ ತಾಲೂಕು ಕಾನೂನು ಸೇವಾ ಸಮಿತಿ, ತಾಲೂಕು ನ್ಯಾಯವಾದಿಗಳ ಸಂಘ, ತಾಲೂಕು ಆಡಳಿತ, ಲಯನ್ಸ್ ಕ್ಲಬ್, ಆರ್.ಪಿ.ಡಿ. ಟಾಸ್ಕ್ ಫೋರ್ಸ್ ಹಾಗೂ ಚೇತನ ಅಂಗವಿಕಲರ ಅಭಿವೃದ್ಧಿ ಸಂಸ್ಥೆ (ರಿ) ಇವರ ಸಂಯುಕ್ತಾಶ್ರಯದಲ್ಲಿ ಹಮ್ಮಿಕೊಳ್ಳಲಾಗಿದ್ದ ಹಿರಿಯ ನಾಗರಿಕರ ದಿನಾಚರಣೆ ಹಾಗೂ 'ಕಾನೂನು ಅರಿವು ಕಾರ್ಯಕ್ರಮ'ವನ್ನು ಜ್ಯೋತಿ ಬೆಳಗಿಸುವ ಮೂಲಕ ಉದ್ಘಾಟಿಸಿ ಅವರು ಮಾತನಾಡಿದರು. ಇತ್ತೀಚಿನ ದಿನಗಳಲ್ಲಿ ತಂದೆ-ತಾಯಿಗಳು ತಮ್ಮ ಜೀವಿತಾವಧಿಯಲ್ಲೇ



ಆಸ್ತಿಯನ್ನು ಮಕ್ಕಳ ಹೆಸರಿಗೆ ಬರೆದುಕೊಟ್ಟು ಬಳಿಕ ಅನಾಥರಾಗುವ ಪ್ರಕರಣಗಳು ಹೆಚ್ಚುತ್ತಿವೆ ಎಂದು ಕಳವಳ ವ್ಯಕ್ತಪಡಿಸಿದರು. ನಿಮ್ಮ ಕೊನೆಯ ಉಸಿರು ಇರೋವರೆಗೂ ನಿಮ್ಮ ಸ್ವಂತ ಗಳಿಕೆಯ ಆಸ್ತಿಯನ್ನು ಯಾರಿಗೂ ಸಂಪೂರ್ಣವಾಗಿ ನಂಬಿ ಬರೆದುಕೊಡಬೇಡಿ ಎಂದು ಹಿರಿಯರಿಗೆ ಕಿವಿಮಾತು ಹೇಳಿದರು. ಮಕ್ಕಳನ್ನು ಅತಿಯಾಗಿ ನಂಬಿ ಮೋಸಹೋಗುವ ಹಿರಿಯರಿಗೆ ಸಂವಿಧಾನ ಹಾಗೂ ಕಾನೂನಿನಲ್ಲಿ ಸೂಕ್ತ ರಕ್ಷಣೆ ಇದೆ ಎಂಬುದನ್ನು ನೆನಪಿಸಿದರು.

2007ರ ಹಿರಿಯ ನಾಗರಿಕರ ಪೋಷಣೆ ಮತ್ತು ರಕ್ಷಣಾ ಕಾಯ್ದೆಯ ಸೆಕ್ಷನ್ 23ರ ಪ್ರಕಾರ, ಆಸ್ತಿಯನ್ನು ಪಡೆದುಕೊಂಡು ತಂದೆ-ತಾಯಿಯನ್ನು ಸರಿಯಾಗಿ ನೋಡಿಕೊಳ್ಳದ ಮಕ್ಕಳ ವಿರುದ್ಧ ಕಾನೂನು ಕ್ರಮ ಜರುಗಿಸಬಹುದು. ಅಂತಹ ಸಂದರ್ಭದಲ್ಲಿ ಆಸ್ತಿ ವರ್ಗಾವಣೆ ಪತ್ರವನ್ನು ರದ್ದುಗೊಳಿಸಿ ಮರುಪಡೆದುಕೊಳ್ಳಲು ಕಾನೂನಿನಲ್ಲಿ ಅವಕಾಶವಿದೆ. ಹಿರಿಯ ನಾಗರಿಕರಿಗೆ ಸಂಬಂಧಿಸಿದ ಸಿವಿಲ್ ಹಾಗೂ ಕ್ರಿಮಿನಲ್ ಪ್ರಕರಣಗಳನ್ನು ತ್ವರಿತವಾಗಿ ಇತ್ಯರ್ಥಪಡಿಸಲಾಗುತ್ತಿದ್ದು, ಸಾಕ್ಷಿ ಹೇಳಲು ಬರುವ ವೃದ್ಧರಿಗೆ ನ್ಯಾಯಾಲಯದಲ್ಲಿ ಪ್ರಥಮ ಆದ್ಯತೆ ನೀಡಲಾಗುತ್ತದೆ.

ಸರ್ಕಾರದ ಬಸ್ ಪ್ರಯಾಣ ಸೌಲಭ್ಯಗಳು, ಬ್ಯಾಂಕ್ ಠೇವಣಿಗಳಲ್ಲಿ ವಿಶೇಷ ಬಡ್ಡಿ ದರ ಹಾಗೂ ಇತರ ಸವಲತ್ತುಗಳನ್ನು ಹಿರಿಯ ನಾಗರಿಕರು ಸದುಪಯೋಗಪಡಿಸಿಕೊಳ್ಳಬೇಕು ಎಂದು ಸಲಹೆ ನೀಡಿದರು.ತಂತ್ರಜ್ಞಾನದ ಭರಾಟೆಯಲ್ಲಿ ಸ್ಮಾರ್ಟ್‌ಫೋನ್ ಅಥವಾ ಕಂಪ್ಯೂಟರ್ ಬಳಕೆ ಬಾರದ ಕಾರಣಕ್ಕೆ ಹಿರಿಯರನ್ನು ಕಡೆಗಣಿಸುವ ಪ್ರವೃತ್ತಿ ಇಂದಿನ ಯುವಜನತೆಯಲ್ಲಿ ಹೆಚ್ಚುತ್ತಿದೆ. ಆದರೆ, ಇಂದಿನ ಯುವಕರಿಗೆ ಬದುಕಿನ ಕಠಿಣ ಸತ್ಯಗಳನ್ನು ಹೇಳಿಕೊಟ್ಟು, ಸಮಸ್ಯೆಗಳಿಗೆ ಸುಲಭ ಪರಿಹಾರ ಒದಗಿಸುವ ಶಕ್ತಿ ಹಿರಿಯರ ಅನುಭವಕ್ಕಿದೆ ಎಂದು ಶ್ಲಾಘಿಸಿದರು.ನಿವೃತ್ತ ನೌಕರರ ಸಂಘದ ಅಧ್ಯಕ್ಷ ಅಮರೇಶಪ್ಪ ಹನೂರು ಅಧ್ಯಕ್ಷತೆ ವಹಿಸಿದ್ದರು.

ಈ ಸಂದರ್ಭದಲ್ಲಿ ಪ್ರಧಾನ ಸಿವಿಲ್ ಮತ್ತು ಜೆ.ಎಂ.ಎಫ್.ಸಿ ನ್ಯಾಯಾಧೀಶ ಹಾಗೂ ಸದಸ್ಯ ಕಾರ್ಯದರ್ಶಿ ಅಂಬಣ್ಣ ಕೆ., ಹೆಚ್ಚುವರಿ ಸಿವಿಲ್ ಮತ್ತು ಜೆ.ಎಂ.ಎಫ್.ಸಿ ನ್ಯಾಯಾಧೀಶ ಸಿದ್ರಾಮ ರೆಡ್ಡಿ, ತಾಲೂಕು ನ್ಯಾಯವಾದಿಗಳ ಸಂಘದ ಅಧ್ಯಕ್ಷ ಭೂಪನಗೌಡ ವಿ. ಪಾಟೀಲ್, ವೈದ್ಯಾಧಿಕಾರಿ ಡಾ. ರುದ್ರಗೌಡ ಪಾಟೀಲ್, ಶಿಶು ಅಭಿವೃದ್ಧಿ ಯೋಜನಾಧಿಕಾರಿ ನಾಗರತ್ನ, ಆರ್.ಪಿ.ಡಿ. ಟಾಸ್ಕ್ ಫೋರ್ಸ್ ರಾಜ್ಯಧ್ಯಕ್ಷ ಸುರೇಶ ಬಂಡಾರಿ, ಚೇತನ ಅಂಗವಿಕಲರ ಅಭಿವೃದ್ಧಿ ಸಂಸ್ಥೆಯ ಅಧ್ಯಕ್ಷ ಹುಸೇನ ಬಾಷಾ ಜಿ. ಬನ್ನಿಗೊಳ , ಉಪನ್ಯಾಸಕರಾದ ಡಿ.ಜಿ. ಗುರಿಕಾರ , ಆರ್.ಪಿ.ಡಿ. ಟಾಸ್ಕ್ ಫೋರ್ಸ್ ರಾಜ್ಯ ಸಹಕಾರ್ಯದರ್ಶಿ ನಾಗರಾಜ ಅಸ್ಕಿಹಾಳ್ , ನಜ್ಮಾ ಸೇರಿದಂತೆ ಇತರರು ಇದ್ದರು .

ನೇಮಕಾತಿ ಪ್ರಕಟಣೆ

ಏಇಂ ನೇಮಕಾತಿ 2026 – 247 ಪ್ರಾಂಶುಪಾಲರ ಹುದ್ದೆಗಳಿಗೆ ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಿ ಅಕ್ಟೋಬರ್ 3, 2026

KEA ನೇಮಕಾತಿ 2026: 247 ಪ್ರಾಂಶುಪಾಲರ ಹುದ್ದೆಗಳಿಗೆ ಅರ್ಜಿ ಸಲ್ಲಿಸಿ. ಕರ್ನಾಟಕ ಪರೀಕ್ಷಾ ಪ್ರಾಧಿಕಾರವು (KEA) ಸೆಪ್ಟೆಂಬರ್ 2026ರ ಅಧಿಕೃತ ಅಧಿಸೂಚನೆಯ ಮೂಲಕ ಪ್ರಾಂಶುಪಾಲರ ಹುದ್ದೆಗಳನ್ನು ಭರ್ತಿ ಮಾಡಲು ಅರ್ಹ ಮತ್ತು ಆಸಕ್ತ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಿದೆ. ಕರ್ನಾಟಕ ಸರ್ಕಾರದಲ್ಲಿ ಉದ್ಯೋಗವನ್ನು ಬಯಸುವವರು ಈ ಅವಕಾಶವನ್ನು ಬಳಸಿಕೊಳ್ಳಬಹುದು. ಆಸಕ್ತ ಅಭ್ಯರ್ಥಿಗಳು 04–ಅಕ್ಟೋಬರ್–2026 ರೊಳಗೆ (ಅಂತಿಮ ದಿನಾಂಕವನ್ನು 24–ಅಕ್ಟೋಬರ್–2026 ರವರೆಗೆ ವಿಸ್ತರಿಸಲಾಗಿದೆ) ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಬಹುದು. ಅಧಿಕೃತ ವೆಬ್‌ಸೈಟ್: cetonline.karnataka.gov.in

ಚಿಕ್ಕಮಗಳೂರು : ಕೆರೆಯಲ್ಲಿ ಆಟವಾಡಲು ತೆರಳಿದ್ದ ಮೂವರು ಮಕ್ಕಳು ನೀರುಪಾಲು

❏ ನೈಜ್ಯ ದೆಸೆ ನ್ಯೂಸ್

ಚಿಕ್ಕಮಗಳೂರು: ಶಾಲೆಗೆ ರಜೆ ಇದ್ದ ಕಾರಣ ಆಟವಾಡಲು ಕೆರೆಗೆ ತೆರಳಿದ್ದ ಮೂವರು ಬಾಲಕರು ನೀರಿನಲ್ಲಿ ಮುಳುಗಿ ಉಸಿರುಗಟ್ಟಿ ಸಾವನ್ನಪ್ಪಿರುವ ದಾರುಣ ಘಟನೆ ತಾಲೂಕಿನ ಮರ್ಲೆ ಗ್ರಾಮದ ಚಿಕ್ಕ ಕೆರೆಯಲ್ಲಿ ನಡೆದಿದೆ. ಮತರನ್ನು ತರುಣ್ (13), ಭುವನ್ (12) ಹಾಗೂ ಲಿಖಿತ್ (12) ಎಂದು ಗುರುತಿಸಲಾಗಿದೆ.



ಮತ ಭುವನ್ ಮತ್ತು ಲಿಖಿತ್ ಮರ್ಲೆ ಗ್ರಾಮದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ 6ನೇ ತರಗತಿಯಲ್ಲಿ ವ್ಯಾಸಂಗ ಮಾಡುತ್ತಿದ್ದರು. ತರುಣ್ ತನ್ನ ಅಜ್ಜಿಯ ಮನೆ ಸಕಲೇಶಪುರ ತಾಲೂಕಿನ ಕುದುರಂಗಿಯಲ್ಲಿ ಏಳನೇ ತರಗತಿ ಓದುತ್ತಿದ್ದು, ರಜೆ ಹಿನ್ನಲೆಯಲ್ಲಿ ಮನೆಗೆ ಬಂದಿದ್ದ. ಈ ಮೂವರೂ ಗೆಳೆಯರು ಸೇರಿ ದನ ಕರುಗಳೊಂದಿಗೆ ಗ್ರಾಮದ ಕೆರೆ ಬಳಿ ತೆರಳಿದ್ದರು. ಕೆರೆಯಲ್ಲಿ ದನ ತೊಳೆಯುವಾಗ ಕಾಲು ಜಾರಿ ಆಳವಾದ ಗುಂಡಿಗೆ ಬಿದ್ದು ಈಜು ಬಾರದೆ ನೀರಿನಲ್ಲಿ ಮುಳುಗಿ ಮತಪಟ್ಟಿದ್ದಾರೆ ಎಂದು ಪೋಷಕರು ಪೊಲೀಸರಿಗೆ ದೂರಿನಲ್ಲಿ ತಿಳಿಸಿದ್ದಾರೆ. ಮೂವರು ಸ್ನೇಹಿತರು ಕೆರೆಯ ಬಳಿಗೆ ಹೋದಾಗ ಒಬ್ಬ ಸ್ನೇಹಿತ ನೀರಿನಲ್ಲಿ ಆಟವಾಡುವಾಗ ಕಾಲು ಜಾರಿ ನೀರಿನಲ್ಲಿ ಮುಳುಗಿದ್ದಾನೆ ಒಬ್ಬನನ್ನು ರಕ್ಷಿಸಲು ಮತ್ತೊಬ್ಬರು ಹೋಗಿ ಮೂವರು ನೀರಿನಲ್ಲಿ ಮುಳುಗಿದ್ದಾರೆ ಎನ್ನಲಾಗಿದೆ. ವಿಷಯ ತಿಳಿಯುತ್ತಿದ್ದಂತೆ ಗ್ರಾಮಸ್ಥರು ಕೆರೆಯ ಬಳಿ ಬಂದು ಶವಗಳನ್ನು ಮೇಲಕೆತ್ತಿ ಸ್ಥಳೀಯ ಸರ್ಕಾರಿ ಆಸ್ಪತ್ರೆಗೆ ಸಾಗಿಸಲಾಯಿತು.ತಹಸಿಲ್ದಾರ್ ರೇಷಾ ಸ್ಥಳಕ್ಕೆ ಬಂದು ಕುಟುಂಬದವರಿಗೆ ಸಾಂತ್ವನ ಹೇಳಿದರು ಹಾಗೂ ಸರ್ಕಾರಿ ಶಾಲಾ ಮಕ್ಕಳು ಮತಪಟ್ಟರೆ ಶಿಕ್ಷಣ ಇಲಾಖೆಯಿಂದ 1.25 ಲಕ್ಷ ನೀಡಲು ಅವಕಾಶ ಇದೆ ಅದನ್ನ ಕೊಡಿಸುವುದಾಗಿ ಭರವಸೆ ನೀಡಿದರು. ತರುಣ್ ಅಜ್ಜ ಕೆಂಚೇಗೌಡ ಎಂಬುವವರು ಕೆಲವು ವರ್ಷಗಳ ಹಿಂದೆ ಇದೇ ಕೆರೆಯಲ್ಲಿ ಆಕಸಿಕವಾಗಿ ಬಿದ್ದು ಮತಪಟ್ಟಿದ್ದರು ತಾತ ಬಿದ್ದ ಕೆರೆಯಲ್ಲಿ ಮೊಮಗನ ಸಾವು ಆಗಿರುವುದು ದುರಂತವೇ ಸರಿ. ಮತಪಟ್ಟ ಮೂವರು ಬಾಲಕರ ಮನೆಯಲ್ಲಿ ಒಬ್ಬೊಬ್ಬರೇ ಗಂಡು ಮಕ್ಕಳು ಈಗ ಮೂರು ಮನೆಗಳ ಗಂಡು ಮಕ್ಕಳು ಇಲ್ಲವಾಗಿರುವುದು ಗ್ರಾಮಸ್ಥರಲ್ಲಿ ಬೇಸರ ತರಿಸಿದೆ. ಸ್ಥಳಕ್ಕೆ ಗ್ರಾಮಾಂತರ ಪೊಲೀಸ್ ಠಾಣೆಯ ಅಧಿಕಾರಿಗಳು ಮತ್ತು ಸಿಬ್ಬಂದಿ ಭೇಟಿ ನೀಡಿ ಪರಿಶೀಲನೆ ನಡೆಸಿ, ಪ್ರಕರಣ ದಾಖಲಿಸಿಕೊಂಡು ಮುಂದಿನ ಕಾನೂನು ಕ್ರಮ ಕೈಗೊಂಡಿದ್ದಾರೆ.

1ನೇ ಪುಟದಿಂದ....

ಸಮುಖದಲ್ಲೇ ಚರ್ಚೆಯಾಗುವಂತೆ ಮುಂಜಾಗ್ರತೆವಹಿಸಿ ಎಂದು ಸೂಚನೆ ನೀಡಿದ್ದಾರೆ.

ಪ್ರಮುಖವಾಗಿ ಬಿಜೆಪಿ ಮತ್ತು ಆರ್‌ಎಸ್–ಎಸ್ ವಿರುದ್ಧ ಹೆಚ್ಚು ಮಾತನಾಡುತ್ತಿರುವವರು ಕುಟುಕು ಕಾರ್ಯಾಚರಣೆ ತಂಡದ ಮೊದಲ ಗುರಿಯಾಗಿದ್ದಾರೆ. ಕಳೆದ ಮೂರ್ನಾಲ್ಕು ತಿಂಗಳಿನಿಂದಲೂ ಈ ರೀತಿಯ ಪ್ರಯತ್ನಗಳು ನಡೆಯುತ್ತಿರುವುದಾಗಿ ಗುಪ್ತಚರ ಇಲಾಖೆ ವರದಿ ನೀಡಿದೆ ಎಂದು ಸಚಿವರಿಗೆ ಮುಖ್ಯಮಂತ್ರಿಯವರು ತಿಳಿಸಿದ್ದಾರೆ. ಕೇಂದ್ರ ಸ್ಥಾನ ಬೆಂಗಳೂರಿನಲ್ಲಷ್ಟೇ ಅಲ್ಲ, ಬೇರೆ ಬೇರೆ ಜಿಲ್ಲೆಗಳ ಪ್ರವಾಸ, ರಾಜ್ಯದ ಹೊರಗಡೆ ಸಂಚರಿಸುವಾಗಲೂ ಕೂಡ ಸಚಿವರು ಎಚ್ಚರಿಕೆಯಿಂದಿರಬೇಕು. ತಮ ಆಸೆ, ಅಭಿಲಾಷೆಗಳನ್ನು ವ್ಯಕ್ತಪಡಿಸುವಾಗ ಹುಷಾರಾಗಿರಬೇಕು. ಅದು ಚಿತ್ರೀಕರಣವಾಗುತ್ತಿದೆಯೇ?, ಧ್ವನಿ ಮುದ್ರಣವಾಗುತ್ತಿದೆಯೇ? ಎಂಬುದನ್ನು ಗಮನಿಸಬೇಕು. ಆದಷ್ಟು ಸೈಬರ್ ಸೆಕ್ಯೂರಿಟಿ ಇರುವ ಫೋನ್‌ಗಳನ್ನೇ ಬಳಸಿ ಎಂದು ಮುಖ್ಯಮಂತ್ರಿಯವರು ಸೂಚಿಸಿದ್ದಾರೆ ಎಂದು ಮೂಲಗಳು ತಿಳಿಸಿವೆ.

ಆಧಾರ್ ತಿದ್ದುಪಡಿಗೆ ಸರತಿ; ಬೆಡ್‌ಶೀಟ್, ಚಪ್ಪಲಿಗಳೇ ಟೋಕನ್

ಕರೂರು ಆಧಾರ್ ಕೇಂದ್ರದಲ್ಲಿ ಜನಜಂಗುಳಿ; ತೆಕ್ಕಲಕೋಟೆ ಕೇಂದ್ರ ಒಂದು ವರ್ಷದಿಂದ ಸ್ಥಗಿತ

❏ ನೈಜ್ಯ ದೆಸೆ ನ್ಯೂಸ್

ಸಿರುಗುಪ್ಪ: ಆಧಾರ್ ನೋಂದಣಿ ಹಾಗೂ ತಿದ್ದುಪಡಿಗಾಗಿ ಸಾರ್ವಜನಿಕರು ತಾಸುಗಟ್ಟಲೆ ಸರತಿಯಲ್ಲಿ ನಿಲ್ಲಬೇಕಾದ ಪರಿಸ್ಥಿತಿ ನಿರ್ಮಾಣವಾಗಿದ್ದು, ಸರದಿ ಕಾಯ್ದಿರಿಸಲು ಬೆಡ್‌ಶೀಟ್, ಚಪ್ಪಲಿ, ಚೀಲ, ಕಲ್ಲು ಹಾಗೂ ಆಧಾರ್ ಕಾರ್ಡ್‌ಗಳನ್ನೇ 'ಟೋಕನ್' ಆಗಿ ಇಡುವಂತಾಗಿದೆ.

ತಾಲೂಕಿನ ಕರೂರು ಗ್ರಾಮದ ನಾಡಕಚೇರಿಯಲ್ಲಿರುವ ಆಧಾರ್ ಕೇಂದ್ರಕ್ಕೆ ಕರೂರು ವ್ಯಾಪ್ತಿಯ 18 ಗ್ರಾಮಗಳ ಜನರು ಆಧಾರ್ ಸಂಬಂಧಿತ ಸೇವೆಗಾಗಿ ಬರುತ್ತಿದ್ದಾರೆ. ಪ್ರತಿ ಸೋಮವಾರ 250ರಿಂದ 300 ಟೋಕನ್‌ಗಳನ್ನು ನೀಡಲಾಗುತ್ತಿದ್ದು, ಟೋಕನ್ ಪಡೆಯಲು ಗ್ರಾಮಸ್ಥರು ಬೆಳಗಿನ



ಜಾವ 6 ಗಂಟೆಯಿಂದಲೇ ಕೇಂದ್ರದ ಬಳಿ ಜಮಾಯಿಸುತ್ತಿದ್ದಾರೆ. ಇದರಿಂದ ನೂಕುನುಗ್ಗಲು ಉಂಟಾಗುತ್ತಿದೆ ಎಂದು ಗ್ರಾಮಸ್ಥರು ದೂರಿದ್ದಾರೆ. ತೆಕ್ಕಲಕೋಟೆ ನಾಡಕಚೇರಿಯ ಆಧಾರ್ ಕೇಂದ್ರವು ಕಳೆದ ಒಂದು ವರ್ಷದಿಂದ ತಾಂತ್ರಿಕ ಸಮಸ್ಯೆಯಿಂದ ಸ್ಥಗಿತಗೊಂಡಿರುವುದರಿಂದ ತೆಕ್ಕಲಕೋಟೆ ಪಟ್ಟಣ ಸೇರಿದಂತೆ ಸುತ್ತಮುತ್ತಲಿನ ಗ್ರಾಮಗಳ ಜನರು ಕರೂರು ಹಾಗೂ ಸಿರಿಗೇರಿ ಭಾಗದ ಆಧಾರ್ ಕೇಂದ್ರಗಳತ್ತ ತೆರಳುವಂತಾಗಿದೆ. ನೆರೆಯ ಆಂಧ್ರಪ್ರದೇಶದಿಂದಲೂ ಜನರು



ಆಗಮಿಸುತ್ತಿರುವುದರಿಂದ ಕೇಂದ್ರಗಳಲ್ಲಿ ಹೆಚ್ಚಿನ ಜನದಟ್ಟಣೆ ಕಂಡುಬರುತ್ತಿದೆ.

ಬಿಸಿಲಿನಲ್ಲಿ ದೀರ್ಘಕಾಲ ನಿಲ್ಲಲು ಸಾಧ್ಯವಾಗದ ಸಾರ್ವಜನಿಕರು ತಮ್ಮ ಸರದಿ ತಪ್ಪದಂತೆ ನೆಲದ ಮೇಲೆ ಬೆಡ್‌ಶೀಟ್, ಚಪ್ಪಲಿ, ಚೀಲ, ಕಲ್ಲು ಹಾಗೂ ಆಧಾರ್ ಕಾರ್ಡ್‌ಗಳನ್ನು ಇಟ್ಟು ಸ್ಥಳ ಕಾಯ್ದಿರಿಸುತ್ತಿದ್ದಾರೆ. ಆಧಾರ್ ಕೇಂದ್ರದಲ್ಲಿ ಸಾರ್ವಜನಿಕ–ರಿಗೆ ಯಾವುದೇ ತೊಂದರೆಯಾಗದಂತೆ ಸೇವೆ ನೀಡುವ ಉದ್ದೇಶದಿಂದ ಟೋಕನ್ ವ್ಯವಸ್ಥೆ ಮಾಡಲಾಗಿದೆ ಎಂದು ಕಂದಾಯ ಅಧಿಕಾರಿ ಹನುಮಂತಪ್ಪ ತಿಳಿಸಿದ್ದಾರೆ.

ಹೇಳಿಕೆ 'ತೆಕ್ಕಲಕೋಟೆ ಆಧಾರ್ ಕೇಂದ್ರದಲ್ಲಿ ತಾಂತ್ರಿಕ ಸಮಸ್ಯೆ ಉಂಟಾಗಿದ್ದು . ಸಮಸ್ಯೆಯನ್ನು ಎರಡು?ಮೂರು ದಿನಗಳಲ್ಲಿ ಪರಿಹರಿಸಿ ಕೇಂದ್ರವನ್ನು ಪುನರಾರಂಭಿಸಲಾಗುವುದು' ತಹಶೀಲ್ದಾರ್ ಗೌಸಿಯಾ ಬೇಗಂ ತೆಕ್ಕಲಕೋಟೆ ಸಮೀಪದ ಕರೂರು ಗ್ರಾಮದ ಆಧಾರ್ ಕೇಂದ್ರದಲ್ಲಿ ಸರತಿಗಾಗಿ ಬೆಡ್‌ಶೀಟ್, ಚಪ್ಪಲಿ, ಚೀಲ ಹಾಗೂ ಆಧಾರ್ ಕಾರ್ಡ್‌ಗಳನ್ನು ಇಟ್ಟು ಕಾಯುತ್ತಿರುವ ಸಾರ್ವಜನಿಕರು. ಸಿರಿಗೇರಿ ಗ್ರಾಮದ ಆಧಾರ್ ಕೇಂದ್ರದಲ್ಲಿ ಸರತಿಗಾಗಿ ಕಲ್ಲು, ಚಪ್ಪಲಿ ಹಾಗೂ ಆಧಾರ್ ಕಾರ್ಡ್‌ಗಳನ್ನು ಇಟ್ಟಿರುವ ದೃಶ್ಯ. ವರದಿ : ಮಸೀದಿ,ಅಬ್ದುಲ್ ಗೌಸ್, ಸಿರುಗುಪ್ಪ

ಹೆಲ್ತ್ ಇನ್ಸ್‌ಪೆಕ್ಟರ್ ಗದ್ದೆಪ್ಪ ಅಗಲದಳ ವಿರುದ್ಧ ಸೂಕ್ತ ತನಿಖೆ ಹಾಗೂ ಕ್ರಮಕ್ಕೆ ಅಂಬೇಡ್ಕರ್ ಸೇನೆ ಒತ್ತಾಯ

❏ ನೈಜ್ಯ ದೆಸೆ ನ್ಯೂಸ್

ಲಿಂಗಸಗೂರು ನಗರದ ಗುಲ್ಬರ್ಗಾ ರಸ್ತೆ, ವಾರ್ಡ್ ನಂ 7 ರಲ್ಲಿರುವ ವಿಶಾಲ್ ಮೆಗಾ ಮಾರ್ಟ್ ಅಂಗಡಿಯು ಗ್ರಾಹಕರಿಗೆ ಯಾವುದೇ ಮೂಲಸೌಕರ್ಯ ಕಲ್ಪಿಸದೆ ವ್ಯಾಪಾರ ಮಾಡುತ್ತಿದೆ ಎಂದು ದಿನಾಂಕ 06–10–2026 ರಂದು ಪುರಸಭೆಗೆ ಮನವಿ ಸಲ್ಲಿಸಿದ್ದೆವು. ಹೆಲ್ತ್ ಇನ್ಸ್‌ಪೆಕ್ಟರ್ ಗದ್ದೆಪ್ಪ ಅಗಲದಳ, ಲಂಚ ಪಡೆದು. ವಿಶಾಲ್ ಮೆಗಾ ಮಾರ್ಟ್‌ಗೆ ಟ್ರೇಡ್ ಲೈಸೆನ್ಸ್ ನೀಡಿದ ಇವರ ವಿರುದ್ಧ ಸೂಕ್ತ ತನಿಖೆ ಹಾಗೂ ಕ್ರಮಕ್ಕೆ ಒತ್ತಾಯಿಸಿ ಅಂಬೇಡ್ಕರ್ ಸೇನೆಯ ತಾಲೂಕು ಪ್ರಧಾನ ಕಾರ್ಯದರ್ಶಿ, ಅಮರೇಶ್ ಹೆಚ್. ಆನೆಹೊಸೂರು, ಸಹಾಯಕ ಆಯುಕ್ತರ ಮೂಲಕ ಜಿಲ್ಲಾಧಿಕಾರಿ ಗಳಿಗೆ ಮನವಿಯನ್ನು ಸಲ್ಲಿಸಿದರು .

ಕಾನೂನು ಬಾಹಿರವಾಗಿ ಲೈಸೆನ್ಸ್ ನೀಡಿಕೆ : ಪುರಸಭೆಯ ಜೂನಿಯರ್ ಹೆಲ್ತ್ ಇನ್ಸ್‌ಪೆಕ್ಟರ್ ಗದ್ದೆಪ್ಪ ಅಗಲದಳ ರವರು ತಾವೇ ಐಉಖ–ಖಿಐ–622304–2026–27 (ದಿನಾಂಕ 07–10–2026) ನಂಬರಿನ ಲೈಸೆನ್ಸ್ ನೀಡಿದ್ದಾರೆ. ಹಾಗೂ ಪರವಾನಿಗೆದಾರರ ಫೋಟೋದಲ್ಲಿ ಬೇರೆಯವರ ಫೋಟೋ ಇದೆ. ಇದು ಕರ್ನಾಟಕ ಪುರಸಭೆ ಕಾಯ್ದೆ 1964 ರ ನಿಯಮ 31(1) ರ ಸ್ಪಷ್ಟ ಉಲ್ಲಂಘನೆ. ಪರಿಶೀಲನೆ ಮಾಡದೆ, ಯಾವುದೇ



ದಾಖಲೆ ಪರಿಶೀಲಿಸದೆ ಅಂಗಡಿ ಮಾಲೀಕ ಖಂಎಂ ಎ ರವರಿಂದ ಹಣ ಪಡೆದು ಈ ಲೈಸೆನ್ಸ್ ನೀಡಲಾಗಿದೆ. ನಾವು ದಾಖಲೆ ಕೇಳಿದರೆ ಫೋನ್ ತೆಗೆಯುತ್ತಿಲ್ಲ, ಕಚೇರಿಗೆ ಹೋದರೆ ಚೀಫ್ ಆಫೀಸರ್ ಬರುವವರೆಗೂ ಏನೂ ಮಾಡಕ್ಕಾಗಲ್ಲ ಎಂದು ಬೆದರಿಕೆ ಹಾಕುತ್ತಿದ್ದಾರೆ. ತಾವೇ ಹಾಕಿದ ಷರತ್ತುಗಳನ್ನೇ ಉಲ್ಲಂಘನೆ – (ಲಗತ್ತು 3 & 4): ನೀವು ನೀಡಿರುವ ಟ್ರೇಡ್ ಲೈಸೆನ್ಸ್ ನ ಪುಟದಲ್ಲಿರುವ 19 ಷರತ್ತುಗಳಲ್ಲಿ ಈ ಕೆಳಗಿನವುಗಳ ಉಲ್ಲಂಘನೆಯಾಗಿದೆ ಷರತ್ತು12:ನಿಯಮಾನುಸಾರ ಪ್ರತಿದಿನ ಕಸ ವಿಲೇವಾರಿ ಮಾಡಬೇಕು – ಮಾಡುತ್ತಿಲ್ಲ. ಷರತ್ತು 13 ಒಂದು ವೇಳೆ ನೈರ್ಮಲ್ಯ ಹದಗೆಟ್ಟರೆ ಲೈಸೆನ್ಸ್ ರದ್ದು ಮಾಡಬೇಕು – ಇಲ್ಲಿ ಗ್ರಾಹಕರಿಗೆ ಶೌಚಾಲಯವೇ ಇಲ್ಲ. ಷರತ್ತು 5 & 6: ಅಂಗಡಿ, ಹೋಟೇಲ್, ಬಾರ್ ಮತ್ತು ರೆಸ್ಟೋರೆಂಟ್ ಗಳಿಗೆ ಆರೋಗ್ಯ ಇಲಾಖೆ ಹಾಗೂ ಪೊಲೀಸ್ ಇಲಾಖೆಯಿಂದ ತೊಂದರೆ ಆಗದಂತೆ ನೋಡಿಕೊಳ್ಳಬೇಕು – ಇಲ್ಲಿ ಮಹಿಳೆಯರು ಮತ್ತು ಪುರುಷ–ರಿಗೆ ಪ್ರತ್ಯೇಕ ಶೌಚಾಲಯ ಇಲ್ಲ, ಕುಡಿಯುವ ನೀರಿನ ವ್ಯವಸ್ಥೆ ಇಲ್ಲ, ಫ್ಯಾನ್/ಂಅ ವ್ಯವಸ್ಥೆ ಇಲ್ಲ, ಪಾರ್ಕಿಂಗ್ ವ್ಯವಸ್ಥೆ ಇಲ್ಲದೆ ಪುಟ್‌ಪಾತ್ ಹಾಗೂ ರಸ್ತೆಯಲ್ಲೇ ವಾಹನ ನಿಲ್ಲಿಸಿ ಸಾರ್ವಜನಿಕರಿಗೆ ತೊಂದರೆ ಮಾಡುತ್ತಿದ್ದಾರೆ (ಪತ್ರಿಕಾ ವರದಿಯಲ್ಲಿ ಸ್ಪಷ್ಟವಾಗಿದೆ). ತಾವೇ ನೀಡಿರುವ ಲೈಸೆನ್ಸ್ ನ ಷರತ್ತುಗಳನ್ನು ತಾವೇ ಉಲ್ಲಂಘಿಸಲು ಬಿಟ್ಟಿದ್ದಾರೆ .

ಒತ್ತಾಯ 1. ಗದ್ದೆಪ್ಪ ಅಗಲದಳ ರವರ ವಿರುದ್ಧ ಭ್ರಷ್ಟಾಚಾರ ಮತ್ತು ಕರ್ತವ್ಯ ಲೋಪ ಆರೋಪದಡಿ ಕೂಡಲೇ ಅಮಾನತು ಮತ್ತು ಇಲಾಖಾ ತನಿಖೆಗೆ ಆದೇಶಿಸಬೇಕು. 2. ನಿಯಮ ಬಾಹಿರವಾಗಿ ನೀಡಿರುವ ಐಉಖ–ಖಿಐ–622304–2026–27 ಲೈಸೆನ್ಸ್ ಅನ್ನು ಕೂಡಲೇ ರದ್ದುಪಡಿಸಬೇಕು. 3. ವಿಶಾಲ್ ಮಾರ್ಟ್ ಗೆ ಮೂಲಸೌಕರ್ಯ ಕಲ್ಪಿಸುವವರೆಗೂ ನೋಟಿಸ್ ಜಾರಿ ಮಾಡಿ ಬೀಗ ಹಾಕಬೇಕು. 4. ಈ ಅಂಗಡಿಗೆ ಸಂಬಂಧಿಸಿದ ಕಟ್ಟಡ ಪರವಾನಿಗೆ, ಫೈರ್ ಓಔಅ, ಪಾರ್ಕಿಂಗ್ ಪ್ಲಾನ್ ದಾಖಲೆಗಳನ್ನು ಸಾರ್ವಜನಿಕವಾಗಿ ಪ್ರಕಟಿಸಬೇಕು. ಇಲ್ಲದಿದ್ದರೆ ಅಂಬೇಡ್ಕರ್ ಸೇನೆ ವತಿಯಿಂದ ಪುರಸಭೆ ಎದುರು ಉಗ್ರ ಪ್ರತಿಭಟನೆ ಮಾಡಲಾಗುವುದು ಎಂದು ಒತ್ತಾಯಿಸಿದರು. ಈ ಸಂದರ್ಭದಲ್ಲಿ ರಾಜು ಭವಿಮಾನಿ , ಶುಭಾಷ್ ದೊಡ್ಡಮನಿ, ಬಸವರಾಜ್ ಚಲುವಾದಿ ಸೇರಿದಂತೆ ಇತರರು ಇದ್ದರು.

ಜಾಲಹಳ್ಳಿಯನ್ನು ಪುರಸಭೆಯನ್ನಾಗಿ ಮೇಲ್ದರ್ಜೆಗೇರಿಸಲು ಜಿಲ್ಲಾ ಉಸ್ತುವಾರಿ ಸಚಿವರಿಗೆ ಮನವಿ

ರಾಯಚೂರು–ದೇವದುರ್ಗ–ಜಾಲಹಳ್ಳಿ–ವಿಜಯಪುರ ನೂತನ ರೈಲು ಮಾರ್ಗಕ್ಕೆ ಶಿಫಾರಸು ಮಾಡುವಂತೆ ಒತ್ತಾಯ

❏ ನೈಜ್ಯ ದೆಸೆ ನ್ಯೂಸ್

ರಾಯಚೂರು: ರಾಯಚೂರು ಜಿಲ್ಲೆಯ ದೇವದುರ್ಗ ತಾಲೂಕಿನ ಜಾಲಹಳ್ಳಿ ಪಟ್ಟಣವನ್ನು ಪುರಸಭೆಯನ್ನಾಗಿ ಮೇಲ್ದರ್ಜೆಗೇ–ರಿಸುವುದು ಹಾಗೂರಾಯಚೂರು ದೇವದುರ್ಗ ಜಾಲಹಳ್ಳಿ?ವಿಜಯಪುರ ನಡುವೆ ನೂತನ ರೈಲು ಸಂಪರ್ಕ ಕಲ್ಪಿಸುವಂತೆ ಕೇಂದ್ರ ಸರ್ಕಾರಕ್ಕೆ ಶಿಫಾರಸು ಮಾಡಬೇಕೆಂದು ಒತ್ತಾಯಿಸಿ ಜಿಲ್ಲಾ ಉಸ್ತುವಾರಿ ಸಚಿವ ಡಾ. ಅಜಯ್ ಸಿಂಗ್ ಅವರಿಗೆ ಮನವಿ ಸಲ್ಲಿಸಲಾಯಿತು.

ಜಾಲಹಳ್ಳಿ ಪಟ್ಟಣದ ಜನಸಂಖ್ಯೆ 25 ಸಾವಿರಕ್ಕೂ ಹೆಚ್ಚಿದ್ದು, 33 ಗ್ರಾಮ ಪಂಚಾಯಿತಿ ಸದಸ್ಯರನ್ನು ಹೊಂದಿದೆ. ಪಟ್ಟಣದಲ್ಲಿ ದೊಡ್ಡ ಮಟ್ಟದ ಸಂತೆ, ವ್ಯಾಪಾರ ಮತ್ತು ವಾಣಿಜ್ಯ ಚಟುವಟಿಕೆಗಳು ನಡೆಯುತ್ತಿವೆ. ಹೆಚ್ಚುತ್ತಿರುವ ಜನಸಂಖ್ಯೆ ಹಾಗೂ ಪಟ್ಟಣದ ವಿಸ್ತರಣೆಗೆ ಅನುಗುಣವಾಗಿ ಅಗತ್ಯ ಮೂಲಸೌಕರ್ಯಗಳನ್ನು ಕಲ್ಪಿಸಲು ಗ್ರಾಮ ಪಂಚಾಯಿತಿಗೆ ಲಭ್ಯವಾಗುವ ಅನುದಾನ ಸಾಕಾಗುತ್ತಿಲ್ಲ. ಈ ಹಿನ್ನೆಲೆಯಲ್ಲಿ ಜಾಲಹಳ್ಳಿಯನ್ನು ಪುರಸಭೆಯನ್ನಾಗಿ



ಮೇಲ್ದರ್ಜೆಗೇರಿಸುವಂತೆ ಮನವಿಯಲ್ಲಿ ಒತ್ತಾಯಿಸಲಾಗಿದೆ. ಜಾಲಹಳ್ಳಿ ಈ ಹಿಂದೆ ಪಟ್ಟಣ ಪಂಚಾಯಿತಿಯಾಗಿದ್ದ ಹಿನ್ನೆಲೆಯಲ್ಲಿ, ಪ್ರಸ್ತುತ ಪಟ್ಟಣದ ಅಗತ್ಯತೆ ಹಾಗೂ ಜನಸಂಖ್ಯೆಯ ಬೆಳವಣಿಗೆಯನ್ನು ಪರಿಗಣಿಸಿ ಪುರಸಭೆಯನ್ನಾಗಿ ಮೇಲ್ದರ್ಜೆಗೇರಿಸಲು ಸರ್ಕಾರ ಅಗತ್ಯ ಕ್ರಮ ಕೈಗೊಳ್ಳಬೇಕು ಎಂದು ಮನವಿ ಮಾಡಲಾಗಿದೆ. ನೂತನ ರೈಲು ಮಾರ್ಗಕ್ಕೆ ಒತ್ತಾಯ ಇದೇವೇಳೆ ರಾಯಚೂರು?ದೇವದುರ್ಗ?ಜಾಲಹಳ್ಳಿ?ವಿ–ಜಯಪುರ ಮಾರ್ಗವಾಗಿ ನೂತನ ರೈಲು ಸಂಪರ್ಕ ಕಲ್ಪಿಸುವಂತೆ ಕೇಂದ್ರ ರೈಲ್ವೆ ಸಚಿವಾಲಯಕ್ಕೆ ಶಿಫಾರಸು ಮಾಡುವಂತೆಯೂ ಮನವಿ ಮಾಡಲಾಗಿದೆ.

ಈ ರೈಲು ಮಾರ್ಗ ನಿರ್ಮಾಣವಾದರೆ ಈ ಭಾಗದ ವ್ಯಾಪಾರ ಮತ್ತು ವಾಣಿಜ್ಯ ಚಟುವಟಿಕೆಗಳಿಗೆ ಉತ್ತೇಜನ ದೊರೆಯುವುದರ ಜತೆಗೆ ಕೃಷಿ ಉತ್ಪನ್ನಗಳ ಸಾಗಣೆ, ವಿದ್ಯಾರ್ಥಿಗಳ ಶಿಕ್ಷಣ ಹಾಗೂ ಉದ್ಯೋಗಾವಕಾಶಗಳಿಗೆ ಹೆಚ್ಚಿನ ಅನುಕೂಲವಾಗಲಿದೆ ಎಂದು ಮನವಿಯಲ್ಲಿ ಉಲ್ಲೇಖಿಸಲಾಗಿದೆ. ಯೋಜನೆಗೆ ಸಂಬಂಧಿಸಿದಂತೆ ಪ್ರಾಥಮಿಕ ಸಮೀಕ್ಷೆ, ಸಾಧ್ಯತಾ ಅಧ್ಯಯನ ಹಾಗೂ ವಿಸ್ತೃತ ಯೋಜನಾ ವರದಿ (DPR) ತಯಾರಿಕೆಗೆ ಅಗತ್ಯ ಕ್ರಮ ಕೈಗೊಳ್ಳುವಂತೆ ಕೇಂದ್ರ ಸರ್ಕಾರಕ್ಕೆ ಶಿಫಾರಸು ಮಾಡಬೇಕೆಂದು ಸಚಿವರಲ್ಲಿ ಮನವಿ ಮಾಡಲಾಗಿದೆ. ಈ ಸಂದರ್ಭದಲ್ಲಿ ಪತ್ರಕರ್ತ ಖಾಜಾ ಹುಸೇನ್ ಬಾಬಾ, ಸ್ಥಳೀಯ ಮುಖಂಡರಾದ ಭೀಮಣ್ಣ ಗುಮೇಧಾರ್ ಸೇರಿದಂತೆ ಹಲವರು ಉಪಸ್ಥಿತರಿದ್ದರು.

ಗಾಣಧಾಳ–ಸೋಮನಮರಡಿ ಗ್ರಾಮಗಳನ್ನು ದೇವದುರ್ಗ ತಾಲೂಕಿಗೆ ಮರುಸೇರ್ಪಡೆಗೆ ಆಗ್ರಹಿಸಿ ಜಿಲ್ಲಾ ಉಸ್ತುವಾರಿ ಸಚಿವರಿಗೆ ಮನವಿ

ಜಾಲಹಳ್ಳಿ ಹೋಬಳಿಯಲ್ಲೇ ಮುಂದುವರಿಸುವಂತೆ ಗ್ರಾಮಸ್ಥರ ಒತ್ತಾಯ; ಅ.12ರಂದು ಬೃಹತ್ ಪ್ರತಿಭಟನೆ ಎಚ್ಚರಿಕೆ

❏ ನೈಜ್ಯ ದೆಸೆ ನ್ಯೂಸ್

ರಾಯಚೂರು: ಅರಕೇರಾ ತಾಲೂಕು ರಚನೆಯ ಸಂದರ್ಭದಲ್ಲಿ ಗಾಣಧಾಳ ಹಾಗೂ ಸೋಮನಮರಡಿ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಗ್ರಾಮಗಳನ್ನು ಅರಕೇರಾ ತಾಲೂಕಿಗೆ ಸೇರ್ಪಡೆಗೊಳಿಸಿರುವ ಕ್ರಮವನ್ನು ಮರುಪರಿಶೀಲಿಸಿ, ಅವುಗಳನ್ನು ದೇವದುರ್ಗ ತಾಲೂಕು ಹಾಗೂ ಜಾಲಹಳ್ಳಿ ಹೋಬಳಿ ವ್ಯಾಪ್ತಿಯಲ್ಲಿಯೇ ಮುಂದುವ–ರಿಸಬೇಕೆಂದು ಆಗ್ರಹಿಸಿ ಗ್ರಾಮಸ್ಥರು ಬುಧವಾರ ರಾಯಚೂರು ಜಿಲ್ಲಾಧಿಕಾರಿ ಕಚೇರಿ ಆವರಣದಲ್ಲಿ ಜಿಲ್ಲಾ ಉಸ್ತುವಾರಿ ಸಚಿವ ಅಜಯ್ ಸಿಂಗ್ ಅವರನ್ನು ಭೇಟಿಯಾಗಿ ಮನವಿ ಸಲ್ಲಿಸಿದರು.

ರಾಯಚೂರು ಜಿಲ್ಲೆಯಲ್ಲಿ ಅರಕೇರಾ ತಾಲೂಕು ರಚನೆಯ ಸಂದರ್ಭದಲ್ಲಿ ಗಾಣಧಾಳ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಕಮಲದಿನ್ನಿ, ಕಕ್ಕಲದೊಡ್ಡಿ, ಗಾಣಧಾಳ ಹಾಗೂ ಸೋಮನಮರಡಿ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಸೋಮನಮರಡಿ, ಬೋಗಿರಾಮನಗುಂಡ, ಸಂಪತರಾಯನದೊಡ್ಡಿ ಮತ್ತು ಮೈಕಲದೊಡ್ಡಿ ಗ್ರಾಮಗಳನ್ನು ಅರಕೇರಾ ತಾಲೂಕಿಗೆ ಸೇರ್ಪಡೆ ಮಾಡಲಾಗಿದೆ. ಈ ಕ್ರಮದಿಂದ



ಗ್ರಾಮಸ್ಥರಿಗೆ ಆಡಳಿತಾತ್ಮಕ ಹಾಗೂ ಸಾರ್ವಜನಿಕ ಸೇವೆಗಳನ್ನು ಪಡೆಯಲು ತೊಂದರೆಯಾಗುತ್ತಿದೆ ಎಂದು ಗ್ರಾಮಸ್ಥರು ಮನವಿಯಲ್ಲಿ ತಿಳಿಸಿದ್ದಾರೆ.

ಅರಕೇರಾ ತಾಲೂಕು ಕೇಂದ್ರದಿಂದ ಕಮಲದಿನ್ನಿ 45 ಕಿ.ಮೀ., ಕಕ್ಕಲದೊಡ್ಡಿ 46 ಕಿ.ಮೀ., ಗಾಣಧಾಳ 50 ಕಿ.ಮೀ., ಬೋಗಿರಾಮನಗುಂಡ 47 ಕಿ.ಮೀ.,ಮೈಕಲದೊಡ್ಡಿ 45 ಕಿ.ಮೀ.,ಸೋಮನಮರಡಿ 46 ಕಿ.ಮೀ. ಹಾಗೂ ಸಂಪತರಾಯನದೊಡ್ಡಿ 51 ಕಿ.ಮೀ. ದೂರದಲ್ಲಿವೆ ಎಂದು ತಿಳಿಸಿದ್ದಾರೆ. ಇದಕ್ಕೆ ವಿರುದ್ಧವಾಗಿ ಜಾಲಹಳ್ಳಿ ಹೋಬಳಿ ಕೇಂದ್ರವು ಈ ಗ್ರಾಮಗಳಿಗೆ ಅತ್ಯಂತ ಸಮೀಪದಲ್ಲಿದ್ದು, ಕಮಲದಿನ್ನಿ ಸುಮಾರು 5 ಕಿ.ಮೀ., ಕಕ್ಕಲದೊಡ್ಡಿ 5.5 ಕಿ.ಮೀ., ಗಾಣಧಾಳ 9 ಕಿ.ಮೀ., ಬೋಗಿರಾಮನಗುಂಡ 7 ಕಿ.ಮೀ., ಸೋಮನಮರಡಿ 6 ಕಿ.ಮೀ., ಸಂಪತರಾಯನದೊಡ್ಡಿ 9 ಕಿ.ಮೀ. ಹಾಗೂ ಮೈಕಲದೊಡ್ಡಿ 4.5 ಕಿ.ಮೀ. ದೂರದಲ್ಲಿವೆ ಎಂದು ಮನವಿಯಲ್ಲಿ ಉಲ್ಲೇಖಿಸಿದ್ದಾರೆ.

ಜಾಲಹಳ್ಳಿ ಪಟ್ಟಣದಲ್ಲಿ ಸರ್ಕಾರಿ ಹಾಗೂ ಖಾಸಗಿ ಪದವಿ ಕಾಲೇಜುಗಳು, ಪದವಿಪೂರ್ವ ಕಾಲೇಜುಗಳು ಸೇರಿದಂತೆ ಶಿಕ್ಷಣ ಸೌಲಭ್ಯಗಳು ಲಭ್ಯವಿವೆ. ಅಲ್ಲದೆ ಆರೋಗ್ಯ, ಸಾರಿಗೆ, ವ್ಯಾಪಾರ–ವಹಿವಾಟು ಹಾಗೂ ಇತರೆ ಸಾರ್ವಜನಿಕ ಸೇವೆಗಳ ದೃಷ್ಟಿಯಿಂದಲೂ ಜಾಲಹಳ್ಳಿ ಗ್ರಾಮಸ್ಥರಿಗೆ ಹೆಚ್ಚು ಅನುಕೂಲಕರವಾಗಿದೆ. ಗ್ರಾಮೀಣ ಭಾಗದ ವಿದ್ಯಾರ್ಥಿಗಳ ಉನ್ನತ ಶಿಕ್ಷಣಕ್ಕೂ ಜಾಲಹಳ್ಳಿ ಸಮೀಪವಾಗಿರುವುದು ಅನುಕೂಲವಾಗಲಿದೆ ಎಂದು ಗ್ರಾಮಸ್ಥರು ತಿಳಿಸಿದ್ದಾರೆ. ಆದ್ದರಿಂದ ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ, 1993ರ ಕಲಂ 4(2)(ಎ) ಹಾಗೂ ಕರ್ನಾಟಕ ಭೂ ಕಂದಾಯ ಅಧಿನಿಯಮದ ಸಂಬಂಧಿತ ನಿಯಮಗಳನ್ನು ಪರಿಶೀಲಿಸಿ, ಮೇಲ್ಕಂಡ ಗ್ರಾಮಗಳನ್ನು ದೇವದುರ್ಗ ತಾಲೂಕಿನ ಜಾಲಹಳ್ಳಿ ಹೋಬಳಿ ವ್ಯಾಪ್ತಿಯಲ್ಲಿಯೇ ಮುಂದುವರಿಸುವಂತೆ ಸರ್ಕಾರ ಘೋಷಿಸಬೇಕು ಎಂದು ಒತ್ತಾಯಿಸಿದ್ದಾರೆ.

ಅಲ್ಲದೆ, ಜನಾಭಿಪ್ರಾಯ ಪಡೆಯಲು ಅಧಿಕಾರಿಗಳನ್ನು ನಿಯೋಜಿಸಿ, ಅಗತ್ಯವಿದ್ದಲ್ಲಿ ಸಂಬಂಧಿಸಿದ ಗ್ರಾಮಗಳಿಗೆ ಭೇಟಿ ನೀಡಿ ವಾಸ್ತವ ಸ್ಥಿತಿಯನ್ನು ಪರಿಶೀಲಿಸಬೇಕು ಎಂದು ಮನವಿ ಮಾಡಿದ್ದಾರೆ. ಅ.12ರಂದು ಪಾದಯಾತ್ರೆ ಮೂಲಕ ಬೃಹತ್ ಪ್ರತಿಭಟನೆ ಎಚ್ಚರಿಕೆ ಅ.7ರಂದು ಸಲ್ಲಿಸಿರುವ ಮನವಿಗೆ ನಾಲ್ಕು ದಿನಗಳೊಳಗೆ ಸರ್ಕಾರ ಹಾಗೂ ಸಂಬಂಧಿಸಿದ ಅಧಿಕಾ–ರಿಗಳು ಸ್ಪಂದಿಸದಿದ್ದರೆ, ಅ.12ರಂದು ಮೇಲ್ಕಂಡ ಗ್ರಾಮಗಳ ನಿವಾಸಿಗಳು ಪಾದಯಾತ್ರೆ ಮೂಲಕ ಜಾಲಹಳ್ಳಿ ನಾಡಕಚೇರಿ/ತಹಶೀಲ್ದಾರ್ ಕಚೇರಿ ಮುಂದೆ ಬೃಹತ್ ಪ್ರತಿಭಟನೆ ನಡೆಸಲಾಗುವುದು ಎಂದು ಗ್ರಾಮಸ್ಥರು ಎಚ್ಚರಿಕೆ ನೀಡಿದ್ದಾರೆ.

ಈ ಸಂದರ್ಭದಲ್ಲಿ ಗಾಣಧಾಳದ ಬಸವರಾಜ್ ವಕೀಲರು, ಸಾಬಣ್ಣ ಹೂಗಾರ್, ಶಾಂತಪ್ಪ ಗಾಣಧಾಳ, ಮೌನೇಶ್ ಗಾಣಧಾಳ, ಸಲ್ಮಾನ್ ಗಾಣಧಾಳ, ನಾಗರಾಜ ಗಾಣಧಾಳ, ಅಮರೇಗೌಡ ಕಮಲದಿನ್ನಿ, ಶರಣಗೌಡ ಕಮಲದಿನ್ನಿ, ಸಾಬಣ್ಣ ಕಮಲದಿನ್ನಿ, ಅಯ್ಯಣ್ಣ ಮಾಸ್ತಿ, ಶಿವನಗೌಡ ದೇಸಾಯಿ, ಸೋಮನಮರಡಿಯ ವಸಂತಕುಮಾರ್ ವಕೀಲರು, ಚನ್ನಬಸವ ಮೈಕಲದೊಡ್ಡಿ, ನಾಗರಾಜ್ ಮೈಕಲದೊಡ್ಡಿ, ರಮೇಶ್ ಮೈಕಲದೊಡ್ಡಿ, ಯಲ್ಲನಗೌಡ ಸೇರಿದಂತೆ ಗಾಣಧಾಳ ಹಾಗೂ ಸೋಮನಮರಡಿ ಗ್ರಾಮ ಪಂಚಾಯಿತಿ ವ್ಯಾಪ್ತಿಯ ನೂರಾರು ಸಾರ್ವಜನಿಕರು ಉಪಸ್ಥಿತ–ರಿದ್ದರು. ಗಾಣಧಾಳ ಹಾಗೂ ಸೋಮನಮರಡಿ ಗ್ರಾಮ ಪಂಚಾಯಿತಿ ವ್ಯಾಪ್ತಿಯ ನಾಗರಿಕರು

ವಚನ ದರ್ಶನ

ಭವಬಂಧನ ಭವಪಾಶವಾದ ಕಾರಣವೇನಯ್ಯಾ?ಹಿಂದಣ ಜನ್ಮದಲಿ ಲಿಂಗವ ಮರೆದೆನಾಗಿ,ಹಿಂದಣ ಸಿರಿಯಲ್ಲಿ ಜಂಗಮವ ಮರೆದೆನಾಗಿ,ಶಿವಶರಣರ ಮನನೋಯಿಸಿ,ಭಕ್ತಿಹೀನನಾಗಿ ಕರಸ್ಥಲದ ಲಿಂಗವ ಮರೆದೆನಾಗಿಈ ಬವಣೆ ಬಂದಿತಲ್ಲದೆ,ಅದೆಲ್ಲಿಯದೊ ಪ್ರಮಥರಾಣೆ,ಮಹಾದಾನಿಯಾದ ನಮ್ಮ ಕೂಡಲಸಂಗಮದೇವಯ್ಯಾ,ನಿಮ್ಮ ಶರಣರ ಸೇವೆಗೆ ಮರಳಿ ಹುಟ್ಟಿಸಿದೆಡೆ ಸಾಲದೆ?

ಜಗಜ್ಯೋತಿ ವಿಶ್ವಗುರು ಬಸವಣ್ಣನವರ ಅತ್ಯಂತ ಪ್ರಸಿದ್ಧ ಹಾಗೂ ಅರ್ಥಗರ್ಭಿತ ವಚನಗಳಲ್ಲಿ ಒಂದಾಗಿದೆ.

ಭವಬಂಧನ ಭವಪಾಶವಾದ ಕಾರಣವೇನಯ್ಯಾ? ಮನುಷ್ಯನಿಗೆ ಈ ಲೌಕಿಕ ಜೀವನ ಅಥವಾ ಸಂಸಾರ ಎಂಬುದು ಒಂದು ಬಂಧನ ಹಾಗೂ ಪಾಶ ಹಗ್ಗ ಬೇಡಿ ಆಗಿ ಕಾಡಲು ಕಾರಣವೇನು? ಎಂದು ಬಸವಣ್ಣನವರು ಪ್ರಶ್ನಿಸುತ್ತಾರೆ.

ಹಿಂದಣ ಜನ್ಮದಲಿ ಲಿಂಗವ ಮರೆದೆನಾಗಿ
ಇದಕ್ಕೆ ಅವರೇ ಉತ್ತರಿಸುತ್ತಾ, "ನಾವು ನಮ್ಮ ಹಿಂದಿನ ಜನ್ಮಗಳಲ್ಲಿ ಭಗವಂತನನ್ನು ಲಿಂಗವನ್ನು ಮರೆತುಬಿಟ್ಟೆವಿ" ಎನ್ನುತ್ತಾರೆ.

ಹಿಂದಣ ಸಿರಿಯಲ್ಲಿ ಜಂಗಮನ ಮರೆದೆನಾಗಿ ನಮಗೆ ಹಿಂದಿನ ಜನ್ಮದಲ್ಲಿ ಸಿರಿ-ಸಂಪತ್ತು ಇದ್ದಾಗ, ಆ ಹಮ್ಮಿನಲ್ಲಿ ಸಮಾಜದ ಕಲ್ಯಾಣಕ್ಕಾಗಿ ಶ್ರಮಿಸುವ ಜಂಗಮರನ್ನು (ಶಿವಶರಣರನ್ನು ಅಥವಾ ಸತ್ಪುರುಷರನ್ನು) ಮರೆತೆವು ಅಥವಾ ಅವರನ್ನು ನಿಂದಿಸಿದೆವು. ಈ ಅಹಂಕಾರ ಮತ್ತು ಮರೆವೇ ನಮ್ಮ ಇಂದಿನ ದುಃಖ ಹಾಗೂ ಸಂಸಾರದ ಬಂಧನಕ್ಕೆ ಮುಖ್ಯ ಕಾರಣ.

ಅರಿದೊಡೀ ಸಂಸಾರವ ಹೊದ್ದಲೀವನೆ ಕೂಡಲಸಂಗಮದೇವಾ! ಒಮ್ಮೆ ನಮಗೆ ಈ ಸತ್ಯದ ಅರಿವಾದರೆ (ನಾವು ಮಾಡಿದ ತಪ್ಪುಗಳ ಅರಿವಾಗಿ, ಭಗವಂತ ಮತ್ತು ಸತ್ಪುರುಷರ ಮಹತ್ವ ತಿಳಿದರೆ), ಓ ಕೂಡಲಸಂಗಮದೇವಾ, ಈ ಮಾಯೆಯ ಸಂಸಾರವು ನಮ್ಮನ್ನು ಮತ್ತೆ ಕಾಡಲು ಸಾಧ್ಯವೇ? ಇಲ್ಲ, ಖಂಡಿತಾ ನಾವು ಈ ಬಂಧನದಿಂದ ಮುಕ್ತರಾಗುತ್ತೇವೆ.

ಸಾರಾಂಶ ಸಂಪತ್ತು ಮತ್ತು ಅಧಿಕಾರ ಬಂದಾಗ ದೇವನನ್ನೂ, ಸಮಾಜವನ್ನೂ ಮರೆಯಬಾರದು. ಅಹಂಕಾರವನ್ನು ಬಿಟ್ಟು ಅರಿವಿನಿಂದ ಬದುಕಿದರೆ ಮಾತ್ರ ಭವಬಂಧನದಿಂದ ಮುಕ್ತಿ ಪಡೆಯಬಹುದು ಎಂಬುದು ಈ ವಚನದ ಸಂದೇಶವಾಗಿದೆ. ವಚನಗಳು ಮನುಕುಲದ ದಾರಿದೀಪ ಶರಣು ಶರಣಾರ್ಥಿಗಳು.

ಪಂಪಯ್ಯಸ್ವಾಮಿ ಸಾಲಿಮಠ
ಅಂತರಗಂಗಿ-ಸಿಂಧನೂರು. 998094144

ಮೈಸೂರು ಜಿಲ್ಲೆ ಉಸ್ತುವಾರಿ ಸಚಿವರು ಮತ್ತು ಶಾಸಕರಿಂದ ವಿಶ್ವವಿಖ್ಯಾತ ಮೈಸೂರು ದಸರಾ ಮಹೋತ್ಸವದ ಮೈಸೂರು ಅರಮನೆ ಅಂಗಳದಲ್ಲಿ ನಡೆಯುತ್ತಿರುವ ವಿವಿಧ ಕಾಮಗಾರಿಗಳನ್ನು ಪರಿಶೀಲನೆ

ನೈಜ್ಯ ದೆಸೆ ನ್ಯೂಸ್

ತಾಂಡವಪುರ: ವಿಶ್ವವಿಖ್ಯಾತ ಮೈಸೂರು ದಸರಾ ಮಹೋತ್ಸವದ ಹಿನ್ನೆಲೆಯಲ್ಲಿ ಮೈಸೂರು ಅರಮನೆ ಅಂಗಳದಲ್ಲಿ ನಡೆಯುತ್ತಿರುವ ವಿವಿಧ ಅಭಿವೃದ್ಧಿಕಾಮಗಾರಿಗಳನ್ನು ಮೈಸೂರು ಜಿಲ್ಲಾ ಉಸ್ತುವಾರಿ ಸಚಿವ ಹಾಗೂ ನಗರಾಭಿವೃದ್ಧಿ ಸಚಿವರು ಆದ ಡಾಕ್ಟರ್ ಎಸ್ ಯತೀಂದ್ರ ಸಿದ್ದರಾಮಯ್ಯ ರವರು ಹಾಗೂ ಶಾಸಕರಾದ ದರ್ಶನ್ ಧ್ರುವ ನಾರಾಯಣ್ ಡಾಕ್ಟರ್ ಡಿ ತಿಮ್ಮಯ್ಯ ಹಿರಿಯ ಪತ್ರಕರ್ತರು ವಿಧಾನ ಪರಿಷತ್ ಸದಸ್ಯರಾದ ಕೆ ಶಿವಕುಮಾರ್ ರವರು ಕಾಮಗಾರಿ ನಡೆದಿರುವ ಸ್ಥಳಗಳಿಗೆ ಭೇಟಿ ನೀಡಿ ಪರಿಶೀಲಿಸಿದರು

ಬಳಿಕ ಸಚಿವರು ಕಾಮಗಾರಿಗಳ ಕುರಿತು ಜಿಲ್ಲಾಧಿಕಾರಿಗಳು ಹಾಗೂ ವಿವಿಧ ಇಲಾಖೆ ಅಧಿಕಾರಿ ಜೊತೆ ಮಾತನಾಡಿ ಕಾಮಗಾರಿ ಗುಣಮಟ್ಟದಿಂದ ಕೂಡಿದ್ದು ಆದಷ್ಟು ಬೇಗನೆ ಕಾಮಗಾರಿಗಳು ಮುಗಿಯಬೇಕು ಎಂದು ಅಧಿಕಾರಿಗಳಿಗೆ ಸೂಚನೆ ನೀಡಿದರು



ಬಳಿಕ ಕರ್ನಾಟಕ ವಸ್ತು ಪ್ರದರ್ಶನ ಪ್ರಾಧಿಕಾರದ ವಸ್ತುಪ್ರದರ್ಶನ ಆವರಣ ಹಾಗೂ ಮೈಸೂರು ಅರಮನೆ ಅಂಗಳದಲ್ಲಿ ನಡೆಯುತ್ತಿರುವ ವಿವಿಧ ಕಾಮಗಾರಿಗಳು ಮತ್ತು ಪೂರ್ವಸಿದ್ಧತೆಗಳನ್ನು ಸಚಿವರು ಶಾಸಕರು ಪರಿಶೀಲನೆ ಮಾಡಿದರು ವಸ್ತುಪ್ರದರ್ಶನ,

ಸಾಂಸ್ಕೃತಿಕ ಕಾರ್ಯಕ್ರಮಗಳ ತಾತ್ಕಾಲಿಕ ಮುಖ್ಯ ವೇದಿಕೆ, ವರ್ಣರಂಜಿತ ದೀಪಾಲಂಕಾರ, ದಸರಾ ವೀಕ್ಷಣೆಗೆ ಆಸನ ವ್ಯವಸ್ಥೆ, ನೆರಳು, ಶುದ್ಧ ಕುಡಿಯುವ ನೀರು, ಶೌಚಾಲಯ ಸೇರಿದಂತೆ ಸಾರ್ವಜನಿಕರು ಹಾಗೂ ಪ್ರವಾಸಿಗರಿಗೆ ಅಗತ್ಯವಿರುವ ಮೂಲಭೂತ ಸೌಕರ್ಯಗಳ ಕಾಮಗಾರಿಗಳ ಪ್ರಗತಿಯನ್ನು ಪರಿಶೀಲಿಸಿ, ನಿಗದಿತ ಸಮಯಕ್ಕೆ ಎಲ್ಲಾ ವ್ಯವಸ್ಥೆಗಳು ಪೂರ್ಣಗೊಳ್ಳುವಂತೆ ಅಧಿಕಾರಿಗಳಿಗೆ ಸಚಿವರುಕಟ್ಟುನಿಟ್ಟಿನ ಸೂಚನೆ ನೀಡಿದರು ನಾಡಹಬ್ಬ ದಸರಾವನ್ನು ಕಣ್ತುಂಬಿಕೊಳ್ಳಲು ದೇಶ-ವಿದೇಶಗಳಿಂದ ಆಗಮಿಸುವ ಲಕ್ಷಾಂತರ ಪ್ರವಾಸಿಗರು ಹಾಗೂ ಸಾರ್ವಜನಿಕರಿಗೆ ಯಾವುದೇ ರೀತಿಯ ತೊಂದರೆಯಾಗದಂತೆ, ಸುರಕ್ಷಿತ, ಸುಸಜ್ಜಿತ ಹಾಗೂ ವ್ಯವಸ್ಥಿತ ರೀತಿಯಲ್ಲಿ ಎಲ್ಲಾ ಕಾರ್ಯಕ್ರಮಗಳನ್ನು ಆಯೋಜಿಸುವಂತೆ ಅಧಿಕಾರಿಗಳಿಗೆ ಸೂಚನೆ ನೀಡಿದರು

ಈ ಸಂದರ್ಭದಲ್ಲಿ ಶಾಸಕರಾದ ದರ್ಶನ್ ಧ್ರುವನಾರಾಯಣ್, ವಿಧಾನ ಪರಿಷತ್ ಸದಸ್ಯರಾದ ಡಾ. ಡಿ. ತಿಮ್ಮಯ್ಯ ಕೆ ಶಿವಕುಮಾರ್, ಜಿಲ್ಲಾಧಿಕಾರಿಗಳಾದ ಜಿ ಲಕ್ಷ್ಮಿಕಾಂತ್ ರೆಡ್ಡಿ ಮೈಸೂರು ಜಿಲ್ಲಾ ಗ್ರಾಮಾಂತರ ಕಾಂಗ್ರೆಸ್ ಸಮಿತಿ ಅಧ್ಯಕ್ಷರಾದ ಬೀರಿಹುಂಡಿ ಬಸವಣ್ಣ, ಜಿಲ್ಲಾ ಪಂಚಾಯತಿ ಮಾಜಿ ಸದಸ್ಯ ರಾಕೇಶ್ ಪಾಪಣ್ಣ ಎಪಿಎಂಸಿ ಮಾಜಿ ಅಧ್ಯಕ್ಷ ಬಂಡಿಪಾಳ್ಯ ಬಸವರಾಜು ಮೈಸೂರು ನಗರ ಪಾಲಿಕೆ ಮಾಜಿ ಸದಸ್ಯ ಗೋಪಿ ಜನಪ್ರತಿನಿಧಿಗಳು ಹಾಗೂ ಜಿಲ್ಲಾ ಮಟ್ಟದ ಹಿರಿಯ ಅಧಿಕಾರಿಗಳು ಈ ಸಂದರ್ಭದಲ್ಲಿ ಹಾಜರಿದ್ದರು

ನಗರ ಮಾವೋವಾದಿಗಳನ್ನು ಮಟ್ಟಹಾಕಲು ಮಹಾರಾಷ್ಟ್ರದಲ್ಲಿ ಹೊಸ ಕಾನೂನು

ನೈಜ್ಯ ದೆಸೆ ನ್ಯೂಸ್

ಮುಂಬೈ: ದೇಶದಲ್ಲೇ ಅತಿ ಹೆಚ್ಚು 64 ಸಕ್ರಿಯ ಮುಂಚೂಣಿ ಸಂಘಟನೆಗಳು ಕಾರ್ಯನಿರ್ವಹಿಸುತ್ತಿರುವ ಮಹಾರಾಷ್ಟ್ರವು ನಗರ ಮಾವೋವಾದಿ ಚಟುವಟಿಕೆಗಳ ಕೇಂದ್ರಬಿಂದುವಾಗಿ ಮಾರ್ಪಟ್ಟಿರುವ ಹಿನ್ನೆಲೆಯಲ್ಲಿ ರಾಜ್ಯ ಸರ್ಕಾರವು ಮಹಾರಾಷ್ಟ್ರ ವಿಶೇಷ ಸಾರ್ವಜನಿಕ ಭದ್ರತಾ ಕಾಯ್ದೆಯನ್ನು ಜಾರಿಗೆ ತಂದಿದೆ.

ಕಾನೂನುಬಾಹಿರ, ವಿಧ್ವಂಸಕ ಮತ್ತು ಉಗ್ರಗಾಮಿ ಚಟುವಟಿಕೆಗಳನ್ನು ತಡೆಯಲು ಹಾಗೂ ಅವುಗಳನ್ನು ಎದುರಿಸಲು ದೃಢವಾದ ಕಾನೂನು ಚೌಕಟ್ಟು ಒದಗಿಸುವ ಉದ್ದೇಶದಿಂದ ಈ ಶಾಸನವನ್ನು ಜಾರಿಗೆ ತರಲಾಗಿದೆ ಎಂದು ರಾಜ್ಯ ಸರ್ಕಾರವು ಬಾಂಬೆ ಹೈಕೋರ್ಟ್‌ಗೆ ಸಲ್ಲಿಸಿರುವ ಅಫಿಡವಿಟ್‌ನಲ್ಲಿ ತಿಳಿಸಿದೆ. ಮಹಾರಾಷ್ಟ್ರ ವಿಶೇಷ ಸಾರ್ವಜನಿಕ ಭದ್ರತಾ ಕಾಯ್ದೆಯ ಸಾಂವಿಧಾನಿಕ ಸಿಂಧುತ್ವವನ್ನು ಪ್ರಶ್ನಿಸಿ ಸಲ್ಲಿಸಲಾಗಿರುವ ಹಲವು ಅರ್ಜಿಗಳಿಗೆ ಪ್ರತಿಕ್ರಿಯೆಯಾಗಿ ಸರ್ಕಾರ ಈ ಅಫಿಡವಿಟ್



ಸಲ್ಲಿಸಿದೆ. ರಾಜ್ಯಾದ್ಯಂತ ನಗರ ಮಾವೋವಾದಿ ಜಾಲಗಳ ಹೆಚ್ಚುತ್ತಿರುವ ಉಪಸ್ಥಿತಿಯು ಕಾನೂನುಬಾಹಿರ ಮತ್ತು ವಿಧ್ವಂಸಕ ಚಟುವಟಿಕೆಗಳನ್ನು ಎದುರಿಸಲು ವಿಶೇಷ ಕಾನೂನು ಚೌಕಟ್ಟಿನ ಅಗತ್ಯವನ್ನು ಸೃಷ್ಟಿಸಿದೆ ಎಂದು ಅದರಲ್ಲಿ ಉಲ್ಲೇಖಿಸಲಾಗಿದೆ.

ಅಫಿಡವಿಟ್ ಪ್ರಕಾರ, ಮಹಾರಾಷ್ಟ್ರವು ನಗರ ಮಾವೋವಾದಿ ಚಟುವಟಿಕೆಗಳ ಕೇಂದ್ರಬಿಂದುವಾಗಿ ಹೊರಹೊಮ್ಮಿದೆ. ಕೇಂದ್ರ ಗೃಹ ಸಚಿವಾಲಯ ಸಂಗ್ರಹಿಸಿರುವ ದತ್ತಾಂಶವನ್ನು ಆಧರಿಸಿ, ರಾಜ್ಯದಲ್ಲಿ 64 ಸಕ್ರಿಯ ಮುಂಚೂಣಿ ಸಂಘಟನೆಗಳು ಕಾರ್ಯನಿರ್ವಹಿಸುತ್ತಿದ್ದು, ಇದು ದೇಶದಲ್ಲೇ ಅತ್ಯಧಿಕ ಸಂಖ್ಯೆಯಾಗಿದೆ ಎಂದು ಸರ್ಕಾರ ಪ್ರತಿಪಾದಿಸಿದೆ. ಈ ಶಾಸನವು ಮೂಲಭೂತ ಸ್ವಾತಂತ್ರ್ಯಗಳು ಹಾಗೂ ಸಾರ್ವಜನಿಕ ಸುವ್ಯವಸ್ಥೆ ಮತ್ತು ರಾಷ್ಟ್ರೀಯ ಸಮಗ್ರತೆಯನ್ನು ರಕ್ಷಿಸುವ ಸರ್ಕಾರದ ಕರ್ತವ್ಯದ ನಡುವೆ ಸಮತೋಲನ ಕಾಯ್ದುಕೊಳ್ಳಲು ಪ್ರಯತ್ನಿಸುತ್ತದೆ ಎಂದು ಅಫಿಡವಿಟ್‌ನಲ್ಲಿ ತಿಳಿಸಲಾಗಿದೆ.

ಕಾಂಗ್ರೆಸ್, ಭಾರತೀಯ ಕಮ್ಯುನಿಸ್ಟ್ ಪಕ್ಷ ಮತ್ತು ಕೆಲವು ಸಾಮಾಜಿಕ ಕಾರ್ಯಕರ್ತರು ಈ ಅರ್ಜಿಗಳನ್ನು ಸಲ್ಲಿಸಿದ್ದರು. ಮುಖ್ಯ ನ್ಯಾಯಮೂರ್ತಿ ಎಂ.ಸಿ. ತ್ರಿಪಾಠಿ ಮತ್ತು ನ್ಯಾಯಮೂರ್ತಿ ಅದ್ವೈತ್ ಸೇಥ್ನಾ ಅವರನ್ನೊಳಗೊಂಡ ಪೀಠವು ಸರ್ಕಾರದ ಅಫಿಡವಿಟ್‌ಗೆ ಪ್ರತಿಕ್ರಿಯೆ ಸಲ್ಲಿಸಲು ಅರ್ಜಿದಾರರಿಗೆ ಕಾಲಾವಕಾಶ ನೀಡಿದೆ.

ಕಾಂಗ್ರೆಸ್ ಮುಖಂಡ ಎ. ರಾಜಶೇಖರ್ ನಾಯಕ್ ಹುಟ್ಟುಹಬ್ಬ ಅದ್ದೂರಿ ಆಚರಣೆ

ನೈಜ್ಯ ದೆಸೆ ನ್ಯೂಸ್

ರಾಯಚೂರು: ಕಾಂಗ್ರೆಸ್ ಮುಖಂಡ ಹಾಗೂ ಆರ್‌ಡಿಸಿಸಿ ಬ್ಯಾಂಕ್‌ನ ಹಾಲಿ ನಿರ್ದೇಶಕ ಎ. ರಾಜಶೇಖರ್ ನಾಯಕ್ ಅವರ ಜನ್ಮದಿನಾಚರಣೆಯನ್ನು ರಾಯಚೂರಿನ ಅವರ ನಿವಾಸದಲ್ಲಿ ಕಾಂಗ್ರೆಸ್ ಕಾರ್ಯಕರ್ತರು ಹಾಗೂ ಅಭಿಮಾನಿಗಳು ಅದ್ದೂರಿಯಾಗಿ ಆಚರಿಸಿದರು.



ಈ ಸಂದರ್ಭದಲ್ಲಿ ಅಭಿಮಾನಿಗಳು ಹಾಗೂ ಕಾಂಗ್ರೆಸ್ ಕಾರ್ಯಕರ್ತರು ಕೇಕ್ ಕತ್ತರಿಸುವ ಮೂಲಕ ರಾಜಶೇಖರ್ ನಾಯಕ್ ಅವರಿಗೆ ಹುಟ್ಟುಹಬ್ಬದ ಶುಭಾಶಯಗಳನ್ನು ಸಲ್ಲಿಸಿದರು. ಕಾರ್ಯಕ್ರಮದಲ್ಲಿ ಚನ್ನಬಸವ ನಾಯಕ್ ಮೈಕಲದೊಡ್ಡಿ, ಜಿಲ್ಲಾ ಪ್ರಧಾನ ಕಾರ್ಯದರ್ಶಿ, ಪರಿಶಿಷ್ಟ ಪಂಗಡ ವಿಭಾಗ, ಖುರ್ಷಿದ್ ಪಟೇಲ್ ಜಾಲಹಳ್ಳಿ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ಉಪಾಧ್ಯಕ್ಷರು, ಶರಣಬಸವ ಮೈಕಲದೊಡ್ಡಿ, ರಮೇಶ್ ಆಗರಟಕಿ ಸೇರಿದಂತೆ ಕಾಂಗ್ರೆಸ್ ಕಾರ್ಯಕರ್ತರು ಹಾಗೂ ಅಭಿಮಾನಿಗಳು ಭಾಗವಹಿಸಿದ್ದರು.

ನೈಜ್ಯ ದೆಸೆ
ಕನ್ನಡ ದಿನಪತ್ರಿಕೆಯನ್ನು ತಪ್ಪದೆ ಓದಿರಿ.

ಜಿಎಸ್‌ಟಿ : ನ್ಯಾಯೋಚಿತ ಪಾಲು ಕೇಳಲು ಸಿಎಂ ಡಿಕೆಶಿ ತಯಾರಿ

ನೈಜ್ಯ ದೆಸೆ ನ್ಯೂಸ್

ಬೆಂಗಳೂರು: ಜಿಎಸ್‌ಟಿ ತೆರಿಗೆಯಲ್ಲಿ ರಾಜ್ಯಕ್ಕೆ ದೊರೆಯಬೇಕಾದ ನ್ಯಾಯೋಚಿತ ಪಾಲು ಪಡೆಯಲು ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ತೀವ್ರ ಪ್ರಯತ್ನ ನಡೆಸಿದ್ದು, ದಕ್ಷಿಣ ಭಾರತದ ರಾಜ್ಯಗಳ ಪರವಾಗಿ ಧ್ವನಿ ಎತ್ತುವ ತಯಾರಿ ನಡೆಸಿದ್ದಾರೆ.ಬೆಂಗಳೂರಿನಲ್ಲಿ ಸತತವಾಗಿ 3 ದಿನಗಳ ಕಾಲ ಅಧಿಕಾರಿಗಳ ಜೊತೆ ನಿರಂತರವಾಗಿ ಜಿಎಸ್‌ಟಿ ಕುರಿತಂತೆ ಸಮಾಲೋಚನೆ ನಡೆಸಿದ್ದರು. ನಿನ್ನೆ ಸಚಿವ ಸಂಪುಟ ಸಭೆಯಲ್ಲಿ ಈ ಬಗ್ಗೆ ಪ್ರಸ್ತಾಪಿಸಿ, ಸಹೋದ್ಯೋಗಿಗಳಿಂದ ಸಲಹೆ ಪಡೆದುಕೊಂಡಿದ್ದಾರೆ.

ನಿನ್ನೆಯಿಂದ ದೆಹಲಿ ಪ್ರವಾಸ ಕೈಗೊಂಡಿರುವ ಮುಖ್ಯಮಂತ್ರಿಯವರು ಇಂದು ರಾಷ್ಟ್ರ ರಾಜಧಾನಿಯಲ್ಲಿ ಹಿರಿಯ ಅಧಿಕಾರಿಗಳ ಜೊತೆ ಚರ್ಚೆ ಮುಂದುವರೆಸಿದ್ದಾರೆ. ದೇಶದಲ್ಲೇ ಕರ್ನಾಟಕ ಅತೀ ಹೆಚ್ಚು ಜಿಎಸ್‌ಟಿ ತೆರಿಗೆ ಪಾವತಿ ಮಾಡುತ್ತಿರುವ ರಾಜ್ಯಗಳಲ್ಲಿ ಎರಡನೇ ಸ್ಥಾನದಲ್ಲಿದೆ. ಆದರೆ ಅದಕ್ಕೆ ಪ್ರತಿಯಾಗಿ ಕೇಂದ್ರ ಸರ್ಕಾರದಿಂದ ತೆರಿಗೆ ಹಂಚಿಕೆಯಲ್ಲಿ ರಾಜ್ಯಕ್ಕೆ ಅತ್ಯಂತ ಕಡಿಮೆ ಪಾಲು ಪಡೆಯುತ್ತಿದೆ. ಈ ಹಿನ್ನೆಲೆಯಲ್ಲಿ ರಾಜ್ಯ ಸರ್ಕಾರ ತನ್ನ ಪಾಲಿನ ನ್ಯಾಯೋಚಿತವಾದ ಹಕ್ಕು ಪಡೆಯಲು ಪ್ರಯತ್ನ ಮುಂದುವರೆಸಿದೆ.

ರಾಜ್ಯದಿಂದ ಸಂಗ್ರಹವಾಗುವ ತೆರಿಗೆಯಲ್ಲಿ ಉತ್ತರ ಪ್ರದೇಶ, ಗುಜರಾತ್, ಬಿಹಾರ, ಮಧ್ಯಪ್ರದೇಶದಂತಹ ರಾಜ್ಯಗಳಿಗೆ ಹೆಚ್ಚಿನ ಪಾಲು ಸಿಗುತ್ತಿದೆ. ಕರ್ನಾಟಕ ಜಿಎಸ್‌ಟಿ ಸಂಗ್ರಹ ಅಷ್ಟೇ ಅಲ್ಲ, ಆದಾಯ ತೆರಿಗೆ, ಟೋಲ್ ಶುಲ್ಕ ಹಾಗೂ ಇತರ ಸೆಸ್‌ಗಳ ಸಂಗ್ರಹದಲ್ಲೂ ಕೇಂದ್ರಕ್ಕೆ ಹೆಚ್ಚಿನ ಹಣ ರವಾನೆಯಾಗುತ್ತಿದೆ. ಕೇಂದ್ರದಿಂದ ತೆರಿಗೆ ಮರು ಹಂಚಿಕೆಯ ವೇಳೆ ಕರ್ನಾಟಕ ತಾತ್ಸಾರಕ್ಕೊಳಗಾಗುತ್ತಿದೆ ಎಂಬ ಆರೋಪಗಳಿವೆ.

ಜೊತೆಗೆ ಕೇಂದ್ರದ ಸಹಭಾಗಿತ್ವದಲ್ಲಿರುವ ವಿವಿಧ ಯೋಜನೆಗಳಿಂದಲೂ ರಾಜ್ಯಕ್ಕೆ ಸೂಕ್ತ ಪ್ರಾತಿನಿಧ್ಯ ದೊರೆಯುತ್ತಿಲ್ಲ ಎಂಬ ಆರೋಪಗಳಿವೆ. ಈ ಎಲ್ಲಾ ಅಂಶಗಳನ್ನು ನಾಳೆ ನಡೆಯುವ ಜಿಎಸ್‌ಟಿ ಕೌನ್ಸಿಲ್ ಸಭೆಯಲ್ಲಿ ಪ್ರಸ್ತಾಪಿಸಿ, ಕೇಂದ್ರ ಹಣಕಾಸು ಸಚಿವರ ಗಮನ ಸೆಳೆಯಲು ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ತಯಾರಿ ಮಾಡಿಕೊಂಡಿದ್ದಾರೆ.



ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತರಾಮನ್ ಅವರ ಅಧ್ಯಕ್ಷತೆಯಲ್ಲಿ ನಡೆಯಲಿರುವ ಜಿಎಸ್‌ಟಿ ಕೌನ್ಸಿಲ್ ಸಭೆಯಲ್ಲಿ ಕರ್ನಾಟಕ ಅಷ್ಟೇ ಅಲ್ಲ, ದಕ್ಷಿಣ ಭಾರತದ ರಾಜ್ಯಗಳಿಗೆ ಆಗುತ್ತಿರುವ ಅನ್ಯಾಯದ ಬಗ್ಗೆಯೂ ಡಿ.ಕೆ.ಶಿವಕುಮಾರ್ ಧ್ವನಿ ಎತ್ತಲಿದ್ದಾರೆ. ಉತ್ತರ ಭಾರತ ಮತ್ತು ದಕ್ಷಿಣ ಭಾರತದ ರಾಜ್ಯಗಳ ನಡುವೆ ಯಾವ ರೀತಿಯ ತಾರತಮ್ಯವಾಗುತ್ತಿದೆ ಎಂಬುದನ್ನು ಡಿ.ಕೆ.ಶಿವಕುಮಾರ್ ನಾಳಿನ ಸಭೆಯಲ್ಲಿ ವಿವರಿಸಲಿದ್ದಾರೆ ಎಂದು ಮೂಲಗಳು ತಿಳಿಸಿವೆ. ಇದಕ್ಕಾಗಿ ದಕ್ಷಿಣ ಭಾರತ ವಿವಿಧ ರಾಜ್ಯಗಳಿಂದಲೂ ಮಾಹಿತಿ ಕಲೆ ಹಾಕಿದ್ದಾರೆ ಮತ್ತು ಅಲ್ಲಿನ ಹಣಕಾಸು ಸಚಿವರ ಜೊತೆ ಚರ್ಚೆ ನಡೆಸಿರುವುದಾಗಿ ಮೂಲಗಳು ತಿಳಿಸಿವೆ.

4 ವರ್ಷಗಳ ಬಳಿಕ ರೆಪೊ ದರ ಶೇ.5.50ಕ್ಕೆ ಏರಿಕೆ, ಹಣದುಬ್ಬರದ ಬಗ್ಗೆ ಆರ್‌ಬಿಐ ಕಳವಳ

ನೈಜ್ಯ ದೆಸೆ ನ್ಯೂಸ್

ನವದೆಹಲಿ: ಹೆಚ್ಚುತ್ತಿರುವ ಹಣದುಬ್ಬರದ ಒತ್ತಡ ಹಾಗೂ ಜಾಗತಿಕ ಆರ್ಥಿಕ ಸವಾಲುಗಳ ಹಿನ್ನೆಲೆಯಲ್ಲಿ ಭಾರತೀಯ ರಿಸರ್ವ್ ಬ್ಯಾಂಕ್ (ಆರ್‌ಬಿಐ)ನ ಹಣಕಾಸು ನೀತಿ ಸಮಿತಿ (ಎಂಪಿಸಿ) ಪ್ರಮುಖ ಸಾಲದ ದರವಾದ ರೆಪೊ ದರವನ್ನು 25 ಬೇಸಿಸ್ ಪಾಯಿಂಟ್‌ಗಳಷ್ಟು ಹೆಚ್ಚಿಸಿ ಶೇ.5.50ಕ್ಕೆ ನಿಗದಿಪಡಿಸಿದೆ. ಫೆಬ್ರವರಿ 2023ರ ಬಳಿಕ ನಡೆದ ಮೊದಲ ಬಡ್ಡಿದರ ಏರಿಕೆ ಇದಾಗಿದೆ. ಅ.5ರಿಂದ 7ರವರೆಗೆ ನಡೆದ ಮೂರು ದಿನಗಳ ಸಭೆಯ ಬಳಿಕ ಎಂಪಿಸಿ ಸರ್ವಾನುಮತದಿಂದ ಈ ನಿರ್ಧಾರ ಕೈಗೊಂಡಿದೆ.

ಇದರೊಂದಿಗೆ ಆರ್‌ಬಿಐ ತನ್ನ ನೀತಿ ನಿಲುವನ್ನು 'ಮಾಪನಾಂಕ ನಿರ್ಣಯಿತ ಬಿಗಿಗೊಳಿಸುವಿಕೆ'ಗೆ ಬದಲಾಯಿಸಿದ್ದು, ಸದ್ಯದ ಪರಿಸ್ಥಿತಿಯಲ್ಲಿ ಬಡ್ಡಿದರ ಕಡಿತಕ್ಕೆ ಅವಕಾಶವಿಲ್ಲ ಎಂಬ ಸೂಚನೆ ನೀಡಿದೆ.ಆರ್‌ಬಿಐ ಗವರ್ನರ್ ಸಂಜಯ್ ಮಲ್ಹೋತ್ರಾ ಮಾತನಾಡಿ, ಭಾರತೀಯ ಆರ್ಥಿಕತೆಯು ಸ್ಥಿರವಾಗಿದ್ದರೂ ಹಣದುಬ್ಬರ ಮತ್ತು ಅದರ ಮುನ್ನೋಟ ಕಳೆದ ವರ್ಷಕ್ಕಿಂತ ಅನುಕೂಲಕರವಾಗಿಲ್ಲ ಎಂದು ಹೇಳಿದ್ದಾರೆ. ಮುಂದಿನ ಮೂರು ತ್ರೈಮಾಸಿಕಗಳಲ್ಲಿ ಗ್ರಾಹಕ



ಬೆಲೆ ಸೂಚ್ಯಂಕ (ಸಿಪಿಐ) ಆಧಾರಿತ ಹಣದುಬ್ಬರ ಸರಾಸರಿ ಶೇ.5.8ರಷ್ಟಾಗುವ ನಿರೀಕ್ಷೆಯಿದ್ದು, ಪೂರ್ಣ ಹಣಕಾಸು ವರ್ಷದಲ್ಲಿ ಇದು ಶೇ.4.4ರಷ್ಟಾಗಬಹುದು ಎಂದು ಅಂದಾಜಿಸಲಾಗಿದೆ.

ಜಾಗತಿಕ ಮಟ್ಟದಲ್ಲಿ ಆಹಾರ ಮತ್ತು ಇಂಧನ ಬೆಲೆಗಳ ಏರಿಕೆ, ಹಣಕಾಸು ಮಾರುಕಟ್ಟೆಗಳಲ್ಲಿನ ಏರಿಳಿತ ಹಾಗೂ ಭೌಗೋಳಿಕ-ರಾಜಕೀಯ ಬೆಳವಣಿಗೆಗಳು ಹಣದುಬ್ಬರದ ಒತ್ತಡ ಹೆಚ್ಚಿಸುತ್ತಿವೆ. ಪ್ರಮುಖ ದೇಶಗಳ ಕೇಂದ್ರ ಬ್ಯಾಂಕ್‌ಗಳ ಹಣಕಾಸು ನೀತಿ, ಅಮೆರಿಕದ ಡಾಲರ್ ಮೌಲ್ಯ ಮತ್ತು ಬಾಂಡ್ ಇಳುವರಿಯ ಏರಿಕೆಯೂ ಆತಂಕಕ್ಕೆ ಕಾರಣವಾಗಿದೆ. ಪೂರೈಕೆ ಆಘಾತಗಳಿಂದ ಉಂಟಾಗುವ ಹಣದುಬ್ಬರದ ನಿರೀಕ್ಷೆಗಳು ಹಾಗೂ ಸಂಸ್ಥೆಗಳ ಬೆಲೆ ನಿಗದಿ ಮೇಲೆ ಉಂಟಾಗುವ ದ್ವಿತೀಯ ಹಂತದ ಪರಿಣಾಮಗಳನ್ನು ನಿಯಂತ್ರಿಸಲು ನೀತಿ ದರವನ್ನು ಮರುಮಾಪನ ಮಾಡುವುದು ಅಗತ್ಯವಾಗಿತ್ತು ಎಂದು ಆರ್‌ಬಿಐ ತಿಳಿಸಿದೆ.

ಪ್ರಸ್ತುತ ಪರಿಸ್ಥಿತಿಯಲ್ಲಿ ಬಡ್ಡಿದರ ಕಡಿತದ ಪ್ರಶ್ನೆಯೇ ಉದ್ಭವಿಸುವುದಿಲ್ಲ ಎಂದು ಗವರ್ನರ್ ಸಂಜಯ್ ಮಲ್ಹೋತ್ರಾ ಸ್ಪಷ್ಟಪಡಿಸಿದ್ದಾರೆ. ಮುಂದಿನ ಕ್ರಮಗಳು ಹಣದುಬ್ಬರ ಮತ್ತು ಆರ್ಥಿಕ ಬೆಳವಣಿಗೆಯಲ್ಲಿನ ಬೆಳವಣಿಗೆಗಳನ್ನು ಆಧರಿಸಿರುತ್ತವೆ. ಪರಿಸ್ಥಿತಿಗೆ ಅನುಗುಣವಾಗಿ ಮುಂದಿನ ದಿನಗಳಲ್ಲಿ ದರ ಹೆಚ್ಚಿಸಬಹುದು ಅಥವಾ ವಿರಾಮ ನೀಡಬಹುದು ಎಂದು ಅವರು ಹೇಳಿದ್ದಾರೆ. ಆಂತರಿಕ ಮತ್ತು ಬಾಹ್ಯ ಸವಾಲುಗಳ ನಡುವೆಯೂ ಭಾರತೀಯ ಆರ್ಥಿಕತೆಯು ಬಲಿಷ್ಠವಾಗಿದ್ದು, ಆರ್ಥಿಕ ಪ್ರಗತಿಯ ವೇಗ ಮುಂದುವರಿಯಲಿದೆ ಎಂದು ಆರ್‌ಬಿಐ ವಿಶ್ವಾಸ ವ್ಯಕ್ತಪಡಿಸಿದೆ.

ಸಾಲಗಾರರಿಗೆ ಬಡ್ಡಿ ಹೊರೆ ಸಾಧ್ಯತೆ ರೆಪೊ ದರವು ಬ್ಯಾಂಕುಗಳು ಆರ್‌ಬಿಐನಿಂದ ಅಲ್ಪಾವಧಿಗೆ ಹಣ ಪಡೆಯುವ ಪ್ರಮುಖ ನೀತಿ ದರವಾಗಿದೆ. ರೆಪೊ ದರ ಏರಿಕೆಯ ಪರಿಣಾಮ ಬ್ಯಾಂಕುಗಳ ನಿಧಿ ವೆಚ್ಚ ಹೆಚ್ಚಾಗುವ ಸಾಧ್ಯತೆಯಿದ್ದು, ವಿಶೇಷವಾಗಿ ಬಾಹ್ಯ ಮಾನದಂಡಗಳಿಗೆ ಜೋಡಿಸಲಾದ ಸಾಲಗಳ ಬಡ್ಡಿದರಗಳಲ್ಲಿ ಏರಿಕೆಯಾಗಬಹುದು. ಇದರಿಂದ ಹೊಸ ಗೃಹ, ವಾಹನ ಮತ್ತು ವೈಯಕ್ತಿಕ ಸಾಲಗಳು ದುಬಾರಿಯಾಗುವ ಸಾಧ್ಯತೆಯಿದೆ.

ಈಗಾಗಲೇ ಸಾಲ ಪಡೆದಿರುವವರ ಇಎಂಐ ಮೇಲೂ ಪರಿಣಾಮ ಬೀರಬಹುದು. ಮತ್ತೊಂದೆಡೆ, ಬ್ಯಾಂಕ್ ಠೇವಣಿಗಳ ಬಡ್ಡಿದರಗಳು ಏರಿಕೆಯಾಗುವ ಸಾಧ್ಯತೆಯೂ ಇದೆ. ಮಧ್ಯಪ್ರಾಚ್ಯದಲ್ಲಿನ ಭೌಗೋಳಿಕ-ರಾಜಕೀಯ ಉದ್ವಿಗ್ನತೆ, ಕಚ್ಚಾ ತೈಲ ಬೆಲೆಗಳ ಏರಿಕೆ ಮತ್ತು ಜಾಗತಿಕ ಹಣಕಾಸು ಪರಿಸ್ಥಿತಿಯ ಬಿಗಿತವು ಭಾರತದಂತಹ ಕಚ್ಚಾ ತೈಲ ಆಮದು ಅವಲಂಬಿತ ಆರ್ಥಿಕತೆಗೆ ಪ್ರಮುಖ ಅಪಾಯಗಳಾಗಿವೆ. ತೈಲ ಬೆಲೆ ಏರಿಕೆಯು ಸಾರಿಗೆ, ಉತ್ಪಾದನೆ ಹಾಗೂ ಇತರ ವಸ್ತುಗಳ ವೆಚ್ಚ ಹೆಚ್ಚಿಸುವ ಮೂಲಕ ಹಣದುಬ್ಬರದ ಮೇಲೆ ದ್ವಿತೀಯ ಹಂತದ ಪರಿಣಾಮ ಬೀರಬಹುದು.

ಅಮೆರಿಕದ ಬಾಂಡ್ ಇಳುವರಿ ಏರಿಕೆ, ಡಾಲರ್ ಬಲವರ್ಧನೆ ಹಾಗೂ ಜಾಗತಿಕ ಹಣಕಾಸು ಮಾರುಕಟ್ಟೆಗಳಲ್ಲಿನ ಅಸ್ಥಿರತೆಯೂ ಭಾರತದ ಹಣಕಾಸು ಪರಿಸ್ಥಿತಿಗೆ ಸವಾಲಾಗಿವೆ. ರೂಪಾಯಿ ಕೂಡ ಇತ್ತೀಚಿನ ದಿನಗಳಲ್ಲಿ ಒತ್ತಡಕ್ಕೆ ಒಳಗಾಗಿದ್ದು, ಅ.6ರಂದು ಡಾಲರ್ ಎದುರು ಸುಮಾರು 96.42ರ ಮಟ್ಟಕ್ಕೆ ಕುಸಿದಿತ್ತು.

OWNER, PUBLISHER, PRINTER BY IRFAN K H NO. 3/117, BALAGANUR, SINDHANOOR, RAICHUR-584138 KARNATAKA AND PRINTED AT SHIVANI PRINTERS, HULKOTI, NEW COURT, OPPOSITE PLOT NO. 28 RS NO. 312/3B, GARAG COMPLEX, GADAG-582101